# ಮಂತ್ರಾಕ್ಷತೆ

## ಮಂತ್ರಾಕ್ಷತೆ*

ಓಂ ಸರ್ವರೂಪಮಯೀ ದೇವೀ ಸರ್ವಂ ದೇವೀಮಯಂ ಜಗತ್

ಅತೋಽಹಂ ವಿಶ್ವರೂಪಾಂ ತ್ವಾಂ ನಮಾಮಿ ಪರಮೇಶ್ವರೀಂ!

ಓಂ ಸೃಷ್ಟಿರೂಪಿ ಜಗನ್ಮಾತೆ ನಮೋ ನಮಃ

ಓಂ ದೃಷ್ಟಿರೂಪಿ ಜಗನ್ಮಾತೆ ನಮೋ ನಮಃ

ಓಂ ದಿವಾರೂಪಿ ಜಗನ್ಮಾತೆ ನಮೋ ನಮಃ

ಓಂ ನಿಶಾರೂಪಿ ಜಗನ್ಮಾತೆ ನಮೋ ನಮಃ

ಓಂ ದೃಷ್ಯರೂಪಿ ಜಗನ್ಮಾತೆ ನಮೋ ನಮಃ

ಓಂ ಸಸ್ಯರೂಪಿ ಜಗನ್ಮಾತೆ ನಮೋ ನಮಃ

ಓಂ ವೃಕ್ಷಭವ್ಯೆ ಜಗನ್ಮಾತೆ ನಮೋ ನಮಃ

ಓಂ ಪಕ್ಷಿಮಧುರೆ ಜಗನ್ಮಾತೆ ನಮೋ ನಮಃ

ಓಂ ಸೂರ್ಯರೂಪಿ ಜಗನ್ಮಾತೆ ನಮೋ ನಮಃ

ಓಂ ಚಂದ್ರರೂಪಿ ಜಗನ್ಮಾತೆ ನಮೋ ನಮಃ

ಓಂ ನಭೋರೂಪಿ ಜಗನ್ಮಾತೆ ನಮೋ ನಮಃ

ಓಂ ಧರಾರೂಪಿ ಜಗನ್ಮಾತೆ ನಮೋ ನಮಃ

ಓಂ ಪುಷ್ಪರೂಪಿ ಜಗನ್ಮಾತೆ ನಮೋ ನಮಃ

ಓಂ ಪರ್ಣರೂಪಿ ಜಗನ್ಮಾತೆ ನಮೋ ನಮಃ

ಓಂ ಮೇಘರೂಪಿ ಜಗನ್ಮಾತೆ ನಮೋ ನಮಃ

ಓಂ ನದೀರೂಪಿ ಜಗನ್ಮಾತೆ ನಮೋ ನಮಃ

ಓಂ ವೃಷ್ಟಿ ದಿವ್ಯೆ ಜಗನ್ಮಾತೆ ನಮೋ ನಮಃ

ಓಂ ಆದ್ರಿ ಭವ್ಯೆ ಜಗನ್ಮಾತೆ ನಮೋ ನಮಃ

ಓಂ ಇಕ್ಷುಪುಷ್ಪೆ ಜಗನ್ಮಾತೆ ನಮೋ ನಮಃ

ಓಂ ಉದಯದಿವ್ಯೆ ಜಗನ್ಮಾತೆ ನಮೋ ನಮಃ

ಓಂ ಅಸ್ತರಮ್ಯೆ ಜಗನ್ಮಾತೆ ನಮೋ ನಮಃ

ಓಂ ಸರೋಚಾರು ಜಗನ್ಮಾತೆ ನಮೋ ನಮಃ

ಓಂ ಶಾಲಿಸುಭಗೆ ಜಗನ್ಮಾತೆ ನಮೋ ನಮಃ

ಓಂ ಸರ್ವರೂಪಿ ಜಗನ್ಮಾತೆ ನಮೋ ನಮಃ

ಓಂ ಸರ್ವಶಕ್ತಿ ಜಗನ್ಮಾತೆ ನಮೋ ನಮಃ

೨೫-೩-೧೯೫೮

* ಸಾಧಕ ಕವಿ ಅಧಿಕಾರದ ಕರ್ತವ್ಯನಿರ್ವಹಣೆಯ ಕಾಲದಲ್ಲಿ ಮತ್ತೆ ಮತ್ತೆ ವೇಗವಾಹನಗಳಲ್ಲಿ ಸಂಚರಿಸಬೇಕಾಗಿ ಬಂದಾಗ ಇಂತು ತನ್ನ ಸಾಧನೆಯನ್ನು ಮುಂದುವರಿಸುತ್ತಾನೆ ಹಗಲೂ ಇರಳೂ ಸಂಚಲಿಸುವ ನಾನಾ ದೃಶ್ಯಗಳ ಮಧ್ಯ ಭಗವದ್ದರ್ಶನ ಅನುಸಂಧಾನ ನಡೆಯುತ್ತಿದೆ. ಉದಾಹರಣೆಗಾಗಿ; ಕಬ್ಬಿನ ಗದ್ದೆಗಳ ನಡುವಣ ರಸ್ತೆಯಲ್ಲಿ ಕಾರು ಚಲಿಸುವಾಗ ಕಬ್ಬಿನ ಹೂವಿನ ಚಾಮರಸಮುದ್ರ ಅಲೆ ಅಲೆ ಚಲಿಸುವ ದಿವ್ಯ ದೃಶ್ಯಕ್ಕೆ 'ಓಂ ಇಕ್ಷುಪುಷ್ಪ ಜಗನ್ಮಾತೆ ನಮೋ ನಮಃ' ಎಂಬ ಮಂತ್ರಧ್ಯಾನಪೂಜೆ ಸಲ್ಲುತ್ತಿರುತ್ತದೆ. ಹಾಗೆಯೆ, ಮುಂದೆ ಕ್ಷಣಾಂತರದಲ್ಲಿ, ನೀರು ತುಂಬಿ ಬೆಳ್ಳಿಯಾಗಿ ಹೊಳೆಯುವ ಬಿತ್ತರದ ಕರ ಕಂಗೊಳಿಸೆ 'ಓಂ ಸರೋಚಾರು ಜಗನ್ಮಾತೆ ನಮೋ ನಮಃ' ಎಂಬ ಜಪೋಪಾಸನೆಗೆ ಚೇತನ ಶರಣಾಗುತ್ತದೆ ಇತ್ಯಾದಿ ಇತ್ಯಾದಿ ಇತ್ಯಾದಿ.

## ೧-೧೦

**ಮಂತ್ರಾಕ್ಷತೆ**

೧

ಕಡಲಲೆ ದಡವನು ಬಡಿಯುವ ತೆರದಲಿ
ಯೌವನ ಎದೆಯನು ಬಡಿಯುತ್ತಿದೆ;
ಬಿರಗಾಳಿಯ ಕಡೆಗೋಲಿನ ಭರದಲಿ
ಬೇಟವು ಬಗೆಯನು ಕಡೆಯುತದೆ!

೨೬-೧೦-೧೯೨೮

೨

**ಸಂದೇಹಿಯ ಪ್ರಾರ್ಥನೆ**

ಓ ದೇವರೆ, ನೀನಿದ್ದರೆ,
ನನ್ನಾತ್ಮವನದು ಇದ್ದರೆ,
ಸಂರಕ್ಷಿಸು, ಬಲವಿದ್ದರೆ!
ಪ್ರಾರ್ಥನೆಯಿದು ನಿನಗೆ,
ಸಂದೇಹವೆ ಆರಾಧನೆ
ಮೇಣ್ ಸಾಧನೆ ನನಗೆ.

೨೦-೧೨-೧೯೨೯

೩

ಅಮ್ಮನ ಮಡಿಲೊಳು ಮಲಗಿರುವೆನಗೆ
ಗುಮ್ಮನ ಭಯವಿಹುದೇನಣ್ಣಾ
ಅಮೃತದ ಹೊಳೆಯೊಳು ತೇಲುವ ನನಗೆ
ಮೃತ್ಯುವ ಭಯವಿಹುದೇನಣ್ಣಾ?

೨೧-೫-೧೯೩೦

೪
**ಬಿಂಕ**

ನೀ ಕಲಿಸಿದುಲಿಯನ್ನೆ ನಾನುಲಿಯಲೊಮ್ಮೊಮ್ಮೆ
ನನಗೆ ಹೆಮ್ಮೆ:
ರವಿಯ ಮರುಬಿಂಬಿಸುವ ಕನ್ನಡಿಗೆ ನನ್ನಂತೆ
ಬಿಂಕವಂತೆ!

೨೦-೯-೧೯೩೧

೫
**ಕವಿಮಾನಸ**

ಮಮ ಮಾಯಾಮಯ ಮನಮಂದಿರದಲಿ
ಶತಚಂದ್ರೋದಯವಾಗುತ್ತಿವೆ;
ಮಮ ಮನ ಮಾನಸ ಕಮಲಾಕರದಲಿ
ಶತ ಸುಮ ವಿಕಷಿತವಾಗುತಿವೆ!

೨೭-೯-೧೯೩೧

೬
**ಮುತ್ತಿನ ಮುಗುಳು**

ಅಂತದ ತುಟಿಯಲಿ ಅನಂತವೊತ್ತಿದ
ಮುತ್ತಿನ ಮುಗುಳಾನು!

೨೭-೯-೧೯೩೧

೭

**ಮುನ್ನುಡಿ**

ತುತ್ತತುದಿಯ ಮೌನಕೇಕೆ
ಇಷ್ಟು ದೊಡ್ಡ ಮುನ್ನುಡಿ?
ರೂಪವಿಲ್ಲದಾತ್ಮಕೇಕೆ
ಜಗದ ರನ್ನಗನ್ನಡಿ?

೫-೧೦-೧೯೩೧

೮

**ನಾನು-ನೀನು**

ನೀಲ ನಭವ ನೋಡಿ ನೋಡಿ
ನಯನ ನೀಲವಾಗಿದೆ;
ಪಯಿರು ಪಸುರಿನೊಡನೆ ಆಡಿ
ಜೀವ ಪಚ್ಚೆಯಾಗಿದೆ:
ಅಂತೆ ನಿನ್ನ ಚಿಂತೆ ಮಾಡಿ
ನಾನು ನೀನೆ ಆಗಿದೆ!

೬-೧೦-೧೯೩೧

೯

**ದೇಹ-ಆತ್ಮ**

ನಿನ್ನ ದೇಹದ ಪಾಪವೆಲ್ಲವು
ದೇಹದೊಡನೇ ಅಳಿವುದು.
ಆದರಾತ್ಮದ ಕುಂದುಕೊರತೆಯ
ಆತ್ಮದೊಡನೇ ಉಳಿವುದು.

೨೯-೧೧-೧೯೩೧

೧೦

**ಶತರೂಪಿ**

ನೂರು ರೂಪದಿ ನಿಂದು ಕಣ್ಗೆ ಮೆರೆಯುವೆ ನೀನು,
ಸೌಂದರ್ಯ ರೂಪಿ.
ನೂರು ಭಾವದಿ ಬಂದು ಎದೆಯ ತುಂಬುವೆ ನೀನು,
ಹೇ ಸತ್ಯರೂಪಿ.

೧೩-೧೦-೧೯೩೨

## ೧೧-೨೦

೧೧

**ನನ್ನ ಮನಮಂದಿರವನೆಲ್ಲ**

ನನ್ನ ಮನಮಂದಿರವನೆಲ್ಲ ನೀ ತುಂಬಿರುವೆ;
ಬೇರೊಬ್ಬರಿಗೆ ಅಲ್ಲಿ ತಾವಿಲ್ಲವೋ!
ಜಗವೆಲ್ಲ ಬೇಡುತಿಹುದೆಡೆಯ ಪಡೆಯಲು ಅಲ್ಲಿ;
ನೀ ತುಂಬಿದಾಮೇಲೆ ತಾವೆಲ್ಲಿಯೋ?

೧೯-೧-೧೯೩೩

೧೨

**ಎರಡು ವರಗಳು**

ಎರಡು ವರಗಳ ಹಿಡಿದು ನಿಂತಿರುವೆ, ದೇವಿ;
ಒಂದು ಕಾಮನಬಿಲ್ಲು, ಇನ್ನೊಂದು ಕಾವಿ!
ಒಂದು ಮುಗಿಲಲಿ ಮುಗುಳ್ನಗೆ ಬೀರಿ ಕರೆಯುತ್ತಿದೆ;
ಇನ್ನೊಂದು ಪಕ್ಕದೊಳೆ ನಿಂತು ಕಿವಿಗೊರೆಯುತಿದೆ
ಎರಡನೂ ನೀಡಿತ್ತ, ಓ ಎನ್ನ ದೇವಿ:
ಕೈಗೆ ಕಾಮನ ಬಿಲ್ಲು, ಮೈಗಿರಲಿ ಕಾವಿ!

೨೨-೭-೧೯೩೩

೧೩

**ಕಲೆ ನಮ್ಮಾತ್ಮದ ಮೇವು**

ಎತ್ತಣ ನೋವು? ಎಲ್ಲಿಯ ಸಾವು?
ದೇವರ ಹುಚ್ಚರೊ ನಾವು!
ಬಾಳೊಳು ಸಾವು ಬೆಲ್ಲದೆ ಬೇವು:
ಕಲೆ ನಮ್ಮಾತ್ಮದ ಮೇವು!

೨೭-೧೦-೧೯೩೩

೧೪

**ಶ್ರದ್ಧೆ-ಸಂದೇಹ**

ನೂರಾರು ಮತಭಕ್ತರೊಣಗು ನಂಬುಗೆಗಿಂತ
ಸಜ್ಜನರ ಸಂದೇಹದಲಿ ಹೆಚ್ಚು ಶ್ರದ್ಧೆಯಿದೆ:
ತಿಳಿಯಲೆಳಸುವ ಸಾಧಕನ ಮನದಿ ಬುದ್ಧಿಯಿದೆ;
ತಿಳಿದಂತೆ ನಟಿಸುವಾತನೊ ಬರಿಯ ದಿಗ್‌ಭ್ರಾಂತ!

೨-೧೦-೧೯೩೩

೧೫

**ಪಠಾಧಿಪತಿ**

ಸುಳ್ಳಿನ ಮಾಲೆಯ ಕೊರಳಿಗೆ ಸೂಡಿ
ಕಳ್ಳನೊಬ್ಬನನು ಗುರುವನು ಮಾಡಿ
ಬಡವರ ಹೊನ್ನನು ಕಾಣಿಕೆ ನೀಡಿ
ಧರ್ಮವ ಮೆರೆವರ ನೋಡಯ್ಯ!

೧೫-೨-೧೯೩೪

೧೬

**ಆನೆ ಮತ್ತು ಕುರುಡರು**

ಮುಟ್ಟಿಸೊಂಡಿಲನು ಮುಂಡಿಗೆ ಎಂಬ,
ಮುಟ್ಟಿ ಕಿವಿಗಳನು ಮೊರವೆಂದೆಂಬ,
ಮುಟ್ಟಿ ಹೊಟ್ಟೆಯನು ಗೋಡೆ ಇದೆಂಬ
ಕುರಡರ ಕಾಣ್ಕೆಯ ಕಾಣಯ್ಯ?

೧೫-೨-೧೯೩೪

೧೭

**ಒಂದು ಹೂವಿಗೆ**

ನಿನ್ನ ಚೆಲುವು ನಿನಗೆ ಅಲ್ಲ,
ನಿನ್ನ ಪಡೆದ ಶಿವನಿಗೆ,
ಮತ್ತೆ ನಿನಗೆ ರಂಗವಾಗಿ
ಶಿವ ಮಾಡಿದ ಅವನಿಗೆ.
ಇದನೊಂದನು ಮರೆಯದಿರು:
ಮರೆತು ಬರಿದೆ ಮೆರೆಯದಿರು,
ಹೂವೇ-ಮುದ್ದು ಹೂವೇ!

೧೮-೭-೧೯೩೪

೧೮

**ಕಾಲ ಮತ್ತು ದೇಶ**

ಕಾಲವೆಂದರೆ ಏನು? ರವಿಯ ದೂರಕೆ ನಾನು
ದಬ್ಬಿದೆನು: ಆ ಆತ್ಮಬಲವೆ ಕಾಲ!
ದೇಶವೆಂದರೆ ಏನು? ಒಲಿದು ಭೂಮಿಯ ನಾನು
ತಬ್ಬಿದೆನು: ಆ ಆತ್ಮದೊಲವೆ ದೇಶ!

೧೪-೧೧-೧೯೩೪

೧೯

**ದೇವರ ಸನ್ನಿಧಿ ಎಲ್ಲೆಲ್ಲು!**

ಯಾರಾಗಿರು ನೀ, ಏನಾಗಿರು ನೀ,
ಎಲ್ಲಿದ್ದೀಯೋ ಅಲ್ಲೇ ನಿಲ್ಲು!
ನಿನಗಿದ್ದರೆ ಮನಸಿದ್ದರೆ ಕಣ್ಣು
ಮೇಲೆ ಕೆಳಗೆ ಸುತ್ತಲು ನೋಡು:
ನೀ ನೋಡುವ ಆ ಹುಲ್ಲು,
ನೀ ನಿಂತಿಹ ಈ ಕಲ್ಲು
ಎಲ್ಲವು ಸ್ವರ್ಗದ ನೆಲೆವೀಡು:
ದೇವರ ಸನ್ನಿಧಿ ಎಲ್ಲೆಲ್ಲು!

೧೭-೭-೧೯೩೫

೧೦
**ಕವಿಯ ಹೃದಯ**

ಕನಸನೆಳೆದು ತಂದು ತಿರೆಗೆ
ಅದನು ನನಸುಗೈವ ವರೆಗೆ
ನುಡಿದೆ ನುಡಿವುದೆದೆಯ ವೀಣೆ;
ಎಂದಿಗದಕೆ ಬಿಡುವ ಕಾಣೆ.

೧೮-೯-೧೯೩೫

## ೨೧-೩೦

೨೧
**ಕ್ರಾಂತಿಮಂತ್ರ**

ಕಡೆಯ ಪುರೋಹಿತನ ಕರುಳು
ಕಡೆಯ ದೊರೆಯ ಕೊರಳಿಗುರುಳು
ಬಿಗಿದ ಹೊರತು ಬರಿಯ ನೆರಳು
ಸ್ವಾತಂತ್ರ್ಯದ ಸ್ವರ್ಗವು!

೩-೧೦-೧೯೩೫

೨೨

**ಕವಿಯೂ ಚೆಲುವೂ**

ಚೆಲುವೆ ಬಿಸುಪು, ಕವಿಯೆ ಬೆಣ್ಣೆ,
ಕರಗಿ ಕರಗಿ ಹರಿವನು!
ಕವಿಯೆ ಬೆಂಕಿ, ಚೆಲುವೆ ಎಣ್ಣೆ,
ದಗ್ಗದಗ್ಗನುರಿವನು!

೪-೧೦-೧೯೩೫

**೧೩**

**ನಿಷ್ಕಾರಣಂ**

ನಾ ನಿನ್ನನೊಲಿದಿಹುದು ನಿನ್ನ ಚೆಲುವಿಕೆಗಲ್ಲ,
ನಿನ್ನ ಐಸಿರಿಗಲ್ಲ, ಮತಿಗಲ್ಲ, ಜಸಕಲ್ಲ:
ನಾ ನಿನ್ನನೊಲಿದಿಹೆನು ನಿಷ್ಕಾರಣಂ!
ಕಾರಣಗಳೆಲ್ಲವೂ ನಶ್ವರಗಳೆಂದು ತಿಳಿ.
ಕಾರಣಂಗಳಿಗೆಲ್ಲ ಮೊದಲ ಕಾರಣ ಒಲುಮೆ:
ಸೃಷ್ಟಿಗೆಮ್ಮೊಲ್ಮೆಯೆ ಮಹಾಕಾರಣಂ!

೧೪-೧೦-೧೯೩೫

**೧೪**

**ಪೂರ್ಣತೆ-ಶೂನ್ಯತೆ**

ನೀನು ಬಳಿಯಿರೆ ಸುಗ್ಗಿಯು,
ದೂರ ಹೋದರೆ ಮಾಗಿಯು.
ನೀನು ಬಳಿಯಿರೆ ಹೂಮಳೆ,
ದೂರ ಹೋದರೆ ಮಳಲಿಳೆ.
ನೀನು ಬಳಿಯಿರೆ ಪೂರ್ಣತೆ,
ದೂರ ಹೋದರೆ ಶೂನ್ಯತೆ.

೧೫-೧೦-೧೯೩೫

೧೫

**ಇದ್ದೊಂದು**

ಇದ್ದೊಂದು ಹೃದಯವನು ಕದ್ದೊಯ್ದೆ ನೀನು:
ಅನ್ಯರಿಗೆ ಕೊಡಲಿನ್ನು ನನಗಿರುವುದೇನು?

೮-೧೧-೧೯೩೫

೧೬

**ಲೋಕಕ್ಕೆ ಕವಿಯ ಪ್ರಾರ್ಥನೆ**

ಹೊಟ್ಟೆಗಿಷ್ಟು ಹಿಟ್ಟು ಕೊಡಿ;
ನನ್ನ ನನಗೆ ಬಿಟ್ಟು ಬಿಡಿ.
ಹಾಡೆ, ಕೇಳಿ, ಹರುಷಪಡಿ;
ಇಷ್ಟೆ ಕವಿಯ ಪ್ರಾರ್ಥನೆ.

೫-೧-೧೯೩೬

೧೭

**ದೆವ್ವ-ದೇವ**

ಕಾಡಿಸುವ ಕಾಡುದೇವತೆಗೆ ಹೊಗಳಿಕೆ ಬೇಕು;
ಪ್ರೇಮನಿಧಿಯಾಗಿರುವ ದೇವರಿಗೊಲುಮೆ ಸಾಕು.

೧೭-೮-೧೯೩೬

೧೮

**ಹಮ್ಮು**

ಗೇರುಸೊಪ್ಪೆಯ ಮಹಾ ಜಲಪಾತವನು ನೋಡಿ
ನೀರರತ ಬಡವು ತೊರೆ ಎಂದಿತು: "ರಜಸ್ಸು!
ಒಂದಿಷ್ಟು ಸಭ್ಯ ಸಂಯಮವಿರದ ನಾಣ್ಗೇಡಿ!
ನೋಡೆನ್ನ ನಡತೆಯಲಿ ಎಷ್ಟಿದೆ ತಪಸ್ಸು?"

೫-೯-೧೯೩೬

೨೯

**ಒಲುಮೆ ರಾಹು**

ನನ್ನಿಂದ ನೀನೆನಿತು ದೂರ ಓಡಿದರೇನು?
ಬೆನ್ನ ಬಿಡುವುದೆ ನಿನ್ನನೆನ್ನೊಲುಮೆ ರಾಹು?
ದೇಶದೇಶಾಂತರದಿ ಜನ್ಮಜನ್ಮಾಂತರದಿ
ಬಿಡದೆ ಬೆನ್ನಟ್ಟಿ ಹಿಡಿವುದು ನಿನ್ನನೆದೆಗಪ್ಪಿ
ನನ್ನೊಲುಮೆಗಿಚ್ಚು ನೀಳ್ದರಿಯ ನೀಡು ಬಾಹು!

೨೬-೭-೧೯೩೭

೩೦

**ಒಳಗೂ ಹೊರಗೂ**

ಮನೆಯ ಹೊರಗೋ ಹಸುರು ಹೊಲವು;
ಮನೆಯ ಒಳಗೋ ಹೊಸತು ಒಲವು!
ಹೊರಗೂ ಚೆಲುವು, ಒಳಗೂ ಚೆಲುವು:
ಕವಿಗೆ ಬೇಕೇನ್ ಬೇರೆ ಗೆಲುವು?

೭-೮-೧೯೩೭

## ೩೧-೪೦

೩೧

**ಮಾರ್ಗದರ್ಶಿ**

ನಾ ನಡೆದ ಹಾದಿಯನು ಹಿಂತಿರುಗಿ ನೋಡಿದರೆ
ಬಗೆಯ ಬಾಯಲಿ ನೆನಹುಗಳ ಮೆಲಕು ಹಾಕಿದರೆ
ಹಜ್ಜೆಹೆಜ್ಜೆಗೆ ನೀನೆ ಕೈಹಿಡಿದು ನಡೆಸಿರುವೆ
ಎಂಬುದನು ನಾನರಿವೆ, ನನ್ನ ಗುರುವೆ!

೯-೧೨-೧೯೩೭

**೩೨**

ರಸದಳನೀರಾರಿ ಹೋಗೆ
ಭಾವದ ತಿರುಳೊಣಗಿಹೋಗೆ
ಕರ್ತವ್ಯದ ಕರಟವು
ಕವಿಯ ಹೃದಯಕೊಂದು ಶೂಲೆ!
ತಿಳಿಯನೆಲ್ಲ ಹೀರ್ದ ಮೇಲೆ
ಉಳಿವುದೇನು? ಚರಟವು!

೨೭-೧೨-೧೯೩೭

**೩೩**

**ಬುದ್ಧಿಸುಖಿ****

ಬುದ್ಧಿಯೀಟಿಯ ಮೊನೆಯ ತುದಿಯಲಿ
ತತ್ತ್ವ ಕುಣಿಯುತಿದೆ;
ರಸ ಸಮಾಧಿಯೊಳೀಂಟಿ ಸಿದ್ಧಿಯು
ಸತ್ತ್ವ ತಣಿಯುತಿದೆ!
ಬದ್ಧಿ ಭಾವಗಳೆರಡರಲ್ಲಿಯು
ಅದ್ರಿಶಿರಕೆ ಸಮುದ್ರದಾಳಕೆ
ಮುಳುಗುತೇರುವ ಕವಿಯ ಕಣ್ಣಿಲಿ
ನೀರು ಹರಿಯುತಿದೆ!

೨೮-೧೨-೧೯೩೭

**೩೪**

ಮಲರುತಿದೆ ಕಣ್ಣೀರ ಕೆರೆಯಲ್ಲಿ ನಗೆದಾವರೆಯ ಮುಗುಳು;
ಮುನಿದತ್ತು ಮತ್ತೆ ನಗುತಿಹಳೆನ್ನ ಅತ್ತೆಮಾವರ ಮಗಳು!

೧೯೩೮

**೩೫**

**ಒಬ್ಬನೆಯೆ ಬಂದೆ**

ಕಣಿಗಿಲೆಯ ಗಿಡದಲ್ಲಿ ಹೂ ಗೋಂಚಲಾಗರಳಿ
ರಂಜಿಸಿರೆ (ಕವಿಯಂತೆ ನಾನು!) ಕಂಡೆದೆ ಬೆಂದೆ:
ತಂತಿ ಬರೆ, ಜೊತೆಗೂಡಿ ನಾವಿಬ್ಬರೂ ತೆರಳಿ,
ನಲ್ಲೆ ತವರೊಳಗುಳಿಯೆ, ನಾನೊಬ್ಬನೆಯೆ ಬಂದೆ!

೬-೩-೧೯೩೮

**೩೬**

**ವಿರಹಿ ಕವಿ**

ಎದೆಯೊಳೊಂದು ಮಸೆವ ಬಾಣ;
ಕೊರಲೊಳೊಂದು ಕೊರೆವ ಗಾಣ!
ಕುದಿಯುತಿಹವು ಪಂಚ ಪ್ರಾಣ:
ಹೊಮ್ಮಲಹುದೆ ಕವಿಯ ಗಾನ?

೧೬-೩-೧೯೩೮

**೩೭**

**ವಿವಾಹ ವರ್ಧಂತಿ**

ಮುಗಿಯಿತಿಂದಿಗೊಂದು ವರುಷ:
ಮುಗಿಯದಿರಲಿ ನಮ್ಮ ಹರುಷ.
ಕರುಣಿಸಯ್ಯ, ಮಹಾಪುರುಷ,
ಕಯ್ಯ ಮುಗಿವೆವು.

ಚರಣತಳದೊಳನವರತವು
ಶರಣು ಹೊಗುವೆವು!

೧-೫-೧೯೩೮

**೩೮**
**ಅಹಂಕಾರ**

ನಾನು ಮಾದಿದೆನೆಂಬ ಬಲೆಯಲಿ
ನಾನರಿಯದಂತೆ
ಬೀಳಗೊಡಿಸದಿರೆನ್ನ ದೇವನೆ,
ಮೀನು ಬೀಳ್ವಂತೆ!

೭-೬-೧೯೩೮

**೩೯**

**ದೃಷ್ಟಿ ವಿಷಾಹಿ**

ಬಿಡು ಸಾಕೀ ಹುಡುಗಾಟದ ದೃಷ್ಟಿ;
ಕಾಮರಾಜ್ಯದಲಿ ದೃಷ್ಟಿಯೆ ಸೃಷ್ಟಿ;
ನೋಟಹುತ್ತದಿಂ ಬೇಟದ ಹಾವು
ಮೂಡಿತ್ತೆನೆ ನಿನಗದೆ ವಿಷಮೇವು.
ರಾವಣನನೆ ತಿಂದಿತೊ ಆ ನೋವು!
- ತಪ್ಪದೊ ನಿನ್ನಾತ್ಮಕೆ ಸಾವು!
೨೮-೯-೧೯೩೮

**೪೦**

ನಿರುಪಮನೆ ಜೋ!
ನಿರ್ಗುಣನೆ ಜೋ!
ಆನಂದಮಯಾ ಜೋ ಜೋ!
ಆಕಾಶ ತೂಗಲಿ ಜೋ!
ಸಾಗರ ತೂಗಲಿ ಜೋ!

ಬೆಟ್ಟತೂಗಲಿ ಜೋ!
ಕಾಡು ತೂಗಲಿ ಜೋ!
ಭೂಮಿ ತೂಗಲಿ ತಿರುಗಿ ಸೂರ್ಯನ ಸುತ್ತ - ಜೋ ! ಜೋ! ಜೋ!

೧೫-೩-೧೯೩೯

---

** ಎಡ್ಡಿಂಗ್‌ಟನ್ ಮತ್ತು ಜೀನ್ಸ್ ಅದರ ವಿಜ್ಞಾನಗ್ರಂಥಗಳನ್ನೋದುತ್ತಾ.

## ೪೧-೫೦

**೪೧**

ಮೆಚ್ಚಿನ ಗಿಡಗಿಡಕೂ ಒಯ್ದು
ಬೈಗಿನ ಸರದಿಯ ನೀರ್ವೊಯ್ದು
ಕವಿ ಕುಳಿತಿರೆ ಹೂದೋಟದಲಿ
ಗಿಡಗಳು ನೀರನು ಸಂಭೋಗಿಸಿದುವು

ಬೇರಿನ ಬೇಟದಲಿ;
ಅವರಾನಂದವನೆಲ್ಲಾ ಒಟ್ಟಿಗೆ
ಸವಿದನು ನೋಟದಲಿ
ಕವಿ ಕಣ್ ಕೂಟದಲಿ!

೨೪-೩-೧೯೩೯

**೪೨**

**ಮಡಿ-ಮೈಲಿಗೆ**

ಮನಸಿಗೆ ಮೈಲಿಗೆಯಾಗಿದೆ, ಗುರುವೇ:
ಬಿದ್ದಿತು ಕೋಪದ ಕೊಚ್ಚೆಯಲಿ,
ಪಶ್ಚಾತ್ತಾಪದ ಸೀಗೆಯೊಳುಜ್ಜಿ
ಮಡಿಮೀಯಿಸೊ ತೀರ್ಥೇಚ್ಛೆಯಲಿ!

೨೮-೩-೧೯೩೯

**೪೩**

ಏರಿತು ಇಳಿಯಿತು
ಹೊಲ ಹೊಲ ಹೊಲ
ಸಸಿರಾಗಿ;
ಉಬ್ಬಿತು ತಗ್ಗಿತು
ಅಲೆ ಅಲೆ ಅಲೆ
ತಲೆದೂಗಿ;
ತಗ್ಗುತ್ತುಬ್ಬುತ್ತೇರುತ್ತಿಳಿಯುತ್ತದೊ
ನಿಂತನು ಕವಿ ಹಸುರಾಗಿ!

೧೯-೯-೧೯೩೯

**೪೪**

ಪ್ರೇಮವೆ ಶಿವ ಶಿವನೇ ಪ್ರೇಮ;
ಪ್ರೀತಿಸುವುದೆ ಪ್ರಾಣದ ನೇಮ!

೩೦-೯-೧೯೩೯

**೪೫**

ನಿನ್ನ ಮಹದಿಚ್ಛೆಗೆ
ನನ್ನ ಅಲ್ಪೇಚ್ಛೆ
ಶರಣು, ಶರಣು, ಶರಣು!

೭-೧೧-೧೯೩೯

**೪೬**

ಮೋಕ್ಷಪತಿ ನೀಂ; ನಿನ್ನ ಬಲ ತಪ್ಪಿದರೆ ನನಗೆ
ಲಕ್ಷ ನಕ್ಷತ್ರ ಬಲವೇವುದಯ್ಯಾ?
ನಿನ್ನ ಬಲವೊಂದಿರಲ್ ಕೋಟಿ ತಾರಾ ಬಲಂ
ನನ್ನ ಸೇವೆಯನೊಲಿವ ತೊಳ್ತಿರಯ್ಯಾ!

೯-೧೧-೧೯೩೯

**೪೭**

ಭವಬಂಧನವನು ಸವಿಗೊಳಿಸಯ್ಃ
ಸವಿಯಾದರೆ ಸೆರೆ-ಬಿಡುಗಡೆಯಯ್!

೧-೧೨-೧೯೩೯

**೪೮**

ಮಾತು ನನ್ನ ಕಲೆ,
ಮೌನ ನನ್ನ ನೆಲೆ,

೬-೨-೧೯೪೦

**೪೯**

**ನನ್ನ ಕಾದಂಬರಿ**

ಕಲೆ ಹಡೆದ ಕಲ್ಪನೆಯೆ
ಕತ್ತರಿಯು, ಕೇಳ;
ಹಾಳೆ ಹಾಳೆಗಳಾಗಿ
ಕತ್ತರಿಸಿ ಬಾಳ
ರಟ್ಟು ಹಾಕಿದೆನೊಟ್ಟುಃ
ಕಾದಂಬರಿಯ ಹುಟ್ಟು
ಗುಟ್ಟೆಲ್ಲ ರಟ್ಟು!

೨-೪-೧೯೪೦

**೫೦**

ಇಂದ್ರನೊಡನೆ ನಂದನದಲಿ
ಅಪ್ಸರಿಯರ ಮೀಂಟುತಾ
ಇಂದ್ರಿಯಗಳನಾಲಿಂಗಿಸಿ

ಅತೀಂದ್ರಿಯಕೆ ದಾಂಟುತಾ
ವಿಹರಿಸೆ ಬಾ, ವಿಮರ್ಶಕಾ,
ಅಮೃತರಸವನೀಂಟುತಾ!

೫-೪-೧೯೪೦

## ೫೧-೬೦

**೫೧**

ಹರಿಯುತಿದೆ ತೆರಪಿಲ್ಲದೆಯೆ, ಕಂಬಿಯಂದದಲಿ
ನಾವ್ ತೆರುವ ಫೀಜು;
ರಜದ ರೈಲಿನ ಮೇಲೆ ಮಿಂಚಿ ಮಝುಮಾಡುತಿದೆ
ನಮ್ಮ ಕಾಲೇಜು.

೧೧-೯-೧೯೪೦

**೫೨**

**ಸೆನೆಟ್**

ಪೇಳರ್ಥವಾಗುವುದೆ ಮಣ್ಣೊಡ್ಡರಿಗೆ ಕಾವ್ಯಸೃಷ್ಟಿ?
ಮಣ್ಣ ಹೊತ್ತರೆ ಮಾತ್ರ ಕೆಲಸ ಕಾಣುವುದವರ ದೃಷ್ಟಿ!

೧೨-೯-೧೯೦

**೫೩**

**ಬೆಂಗಳೂರು ಕಾಲೇಜ್**

ನಮ್ಮ ಕಾಲೇಜಿನಲಿ ದಿನವೂ ಕಲಸ ನಡೆಯುತಿದೆ:
ಕಲ್ಪಿ ಶಿಲ್ಪಿಗೆ ಕೂಲಿಮಾಡುತ ಪಡಿಯ ದುಡಿಯುತಿದೆ.

೧೨-೯-೧೯೪೦

**೫೪**

ಭೂಮ ಸತ್ಯವನಲ್ಪ ತರ್ಕದೊಳಗಿಟ್ಟು
ವಿದ್ವತ್ತು ಕಟ್ಟಿದೊಣಮರದ ಚೌಕಟ್ಟು;
ವಿಜ್ಞಾನ ತತ್ತ್ವವೆಂಬುವ ಹೆಸರನದಕಿಟ್ಟು
ಅಚ್ಚುಕಟ್ಟಿಗೆ ಮೆಚ್ಚಿದರೆ ಹೊಳೆಯವುದೆ ಗುಟ್ಟು?
ಅದು ಬರಿ ಬಿಸಿಲ್ಗುದುರೆಯಟ್ಟು!

೧೭-೯-೧೯೪೦

**೫೫**

ವೀಣಾರೂಪಿ ದೇವರ ದನಿಯಿದು
ಹನಿ ಹನಿ ಹನಿ ತಂತಿ:
'ಆನಂದಂ ಪ್ರಯಂತ್ಯಭಿಸಂವಿಶಂತಿ!'

೨೩-೯-೧೯೪೦

**೫೬**

ಕವಿಗೆ ಕರ್ಣಂ ಪ್ರಮಾಣಂ
ವ್ಯಾಕರಣಮಲ್ತು:
ವ್ಯಾಕರಣಮೇಕೆಂಬೆಯೇಂ?
ಮರೆವುದಕೆ ಕಲ್ತು!

೩-೧೨-೧೯೪೦

**೫೭**

ಗೋ ಕಾಕ ವಿಕೃತಗಳ್ ಕಾಲ್ಗೊಳೆ ಚಿಕಿತ್ಸೆಯಂ,
ಪಲ್ ಕೋಡು ಕೊಕ್ಕಿಗಿದೆ, ಮೆದುಳಿಗುಂಟೇ ಶ್ರಮಂ?

೨೨-೩-೧೯೪೧

**೫೮**

ಕಡಲ ತೆರೆಯ ಗಾನ
ಕೇಳಿ ತಾನ ತಾನ
ಕವಿಯ ಜೀವಮಾನ
ಸಮುದ್ರಯಾನ!

೨೭-೨-೧೯೪೧

**೫೯**

ಕತ್ತಲೆಯ ಕೊಲೆಗೈವ ಕಾಂತಿಖಡ್ಗದ ವೀರ.
ಆತ್ಮ ಉದಯಾಚಲವನೇರಿ ಬಾರ:
ಸತ್ಯಮಾರ್ಗಕೆ ನಡೆವ ಧರ್ಮದೀಪವ ತೋರ;
ಚಿತ್ತ ತಿಮಿರವನಟ್ಟಿ ಕಳೆಯೊ ದೂರ,
ಹೇ ಜ್ಯೋತಿರವತಾರ!

೨೫-೫-೧೯೪೧

**೬೦**

**ವಿರಹಿಯ ವ್ಯಥೆ**

ನಿನಗೆ ತಿಳಿವುದೆಂತು ನನ್ನ
ವಿರಹಿಯಾತನೆ?
ದೂರವಿರಲು ಅರಿಯಲಾರೆ;
ಅರಿಯಲೆಂದು ಬಳಿಗೆ ಸಾರೆ -
ಅಯ್ಯೆ ಸೋತೆನೆ!

೧೮-೬-೧೯೪೧



**೬೧**

**ವೀಣಾ ವಿಶಾರದೆಗೆ**

ಗಾನಮಧು ತುಂಬಿ ಸಿಡಿಯುವ ತಂತಿ ಮಿಡಿಯಲ್ಕೆ
ಹಾತೊರೆವ ವಲ್ಲಕೀ ವಧುವಿನಂತೆ
ನೀನೆಸೆವುದನು ನೋಡಿ ಕಾತರಿಪ ಕವಿಯೆನಗೆ
ವೈಣಿಕನದಾರೆಂಬುದೊಂದೆ ಚಿಂತೆ!

೩-೫-೧೯೪೧

**೬೧**

**ಕೆಲಸ-ಬಿಡುವು**

ಗೋಡೆ ಗೋಡೆಯ ನಡುವಣೆದೆ ಸಾರ್ಥಕಂ
ಗೋಡೆಯಿರ್ಪುದಕೆ:
ಬದುಕೆಲ್ಲ ಬದುಕಲ್ಕೆ ಬಿಯಮಾಗಲಾ
ಬುದಕೊಂದೆ ಬದುಕೆ?

೨೨-೧೧-೧೯೪೨

**೬೩**

ಕಾಲಿಲ್ಲದಾ ಅಶ್ವ
ಗೂನಾದರೇನು?
ನಾನಿಲ್ಲದೀ ವಿಶ್ವ
ಏನಾದರೇನು?

೬-೧೨-೧೯೪೨

**೬೪**

ಹೂವನೀಂಟುವ ಬಣ್ಣಬಣ್ಣದ ಚಿಟ್ಟೆಹಕ್ಕಿ,
ಸಗ್ಗ ಸೊರಗಿದೆ, ನೋಡ, ಹೊಟ್ಟೆಕಿಚ್ಚಿಗೆ ಸಿಕ್ಕಿ!

೬-೧೨-೧೯೪೨

**೬೫**

**ಅವಿದ್ಯಾ**

ಆಶ್ಚರ್ಯಗಳ ಮಧ್ಯೆ
ಪ್ರಶ್ನಚಿಹ್ನೆ;
ಸರ್ವವನು ಸುತ್ತಿಹುದು
ಒಂದು ಸೊನ್ನೆ!

೭-೧-೧೯೪೩

**೬೬**

ಸುತ್ತಲೂ ಮರಿಕಾಡು;
ಮನೆ ಹಕ್ಕಿಗೂಡು:
ಎಲ್ಲಿದೆ, ಹುಡುಕಿ ನೋಡು,
ಕಬ್ಬಿಗನ ಬೀಡು!

೧೩-೧-೧೯೪೩

**೬೭**

**ಶ್ರೀ ಶಂಕರಾಚಾರ್ಯ ಶಿವಮಾನಸ ಪೂಜಾ**

ನೀನಾತ್ಮಂ; ಮತಿ ಗಿರಿಜೆ; ಸಹಚರರ್ ಪ್ರಾಣಗಳ್;
ಮನೆ ಶರೀರಂ; ವಿಷಯೋಪಭೋಗರಚನೆಯೆ ಪೂಜೆ;
ನಿದ್ರೆಯೆ ಸಮಾಧಿ; ಸಂಚಲನೆ ತಾಂ ಪ್ರದಕ್ಷಿಣಂ;
ನುಡಿವುದೆಲ್ಲಂ ನುತಿ, ನೆಗಳ್ಕೆಯಖಿಲಂ ನಿನಗೆ,
ಓ ಗುರುವೆ, ತಾನಪ್ಪುದಾರಾಧನೆ!

೨೮-೯-೧೯೪೩

**೬೮**

**ತೇಜೋಽಸಿ ತೇಜೋ ಮಯಿ ಧೇಹಿ**

ತೇಜಕ್ಕೆ ನೀ ತೇಜವೆನ್ನೊಳುದ್ಭವಿಸು ಬಾ;
ವೀರ್ಯಕ್ಕೆ ನೀ ವೀರ್ಯವೆನ್ನೊಳದ್ಭವಿಸು ಬಾ;
ಬಲಕೆ ನೀನೇ ಬಲಂ ನನ್ನೊಳುದ್ಭವಿಸು ಬಾ;
ಓಜಸಿಗೆ ನೀನೋಜೆ ನನ್ನೊಳದ್ಭವಿಸು ಬಾ;
ಮನ್ಯುವಿಗೆ ನೀ ಮನ್ಯುವೆನ್ನೊಳುದ್ಭವಿಸು ಬಾ;
ಸಹನೆಗೆ ಸಹನೆ ನೀನೆನ್ನೊಳುದ್ಭವಿಸು ಬಾ!

೧-೪-೧೯೪೪

**೭೯**

ಸಿದ್ಧಗುರು ವಾಕ್ಯಕಿಂ ಮಿಗಿಲಿಹುದೆ ಬುದ್ಧಿ?
ಗುರುಬ್ರಹ್ಮಸಿದ್ಧಿಗಿಂ ಮಿಗಿಲಿಹುದೆ ಸಿದ್ಧಿ?

೧೯-೧-೧೯೪೫

**೭೦**

ಬಿಂದು ಬಿಂದು ಸೇರಿ ಸಿಂದು:
ಇಂದು ಇಂದು ಸೇರಿ ಮುಂದು!
ಬರಿದೆ ಮುಂದು ಮುಂದು ಎಂದು
ಕುಳಿತರೆಮಗೆ ಸೊನ್ನೆ ಇಂದೂ!

೨೧-೧-೧೯೪೫

## ೭೧-೮೦

**೭೧**

ಸುತ್ತಮುತ್ತ ಸುಖದ ಹುತ್ತ,
ನಡುವೆ ತಾನು ದುಃಖಫಣಿ;
ಸುತ್ತಮುತ್ತ ಸಿರಿಯ ಮೊತ್ತ,
ನಡುವೆ ತಾನು ನಿತ್ಯಋಣಿ;

ಗಣಿಯ ಕೂಲಿಯಂತೆ ಕೂಲಿ
ಕವಿಯ ಲೇಖನಿ!

೧೦-೨-೧೯೪೫

೭೨

ನೀ ನಿಯಂತೃ, ನಾನೆ ಯಂತ್ರ;
ನಡೆಸಿದಂತೆ ನಡೆಯುವೆ,
ನೀನೆ ಮಂತ್ರ, ನೀನೆ ತಂತ್ರ:
ನೀನಾಗಿಯೆ ಬರೆ, ಪಡೆಯುವೆ!
ಸರ್ವತಂತ್ರ ನೀ ಸ್ವತಂತ್ರ:
ನಿನ್ನನುಳಿದು ಅಸ್ವತಂತ್ರ
ಜಗವತಂತ್ರ!
'ನಾ ಸ್ವತಂತ್ರ' ಎಂಬ ಮಂತ್ರ
ಭಾವಮಾತ್ರ ಪ್ರಕೃತಿಸೂತ್ರ;
ಬರಿ ಅತಂತ್ರ!

೨೫-೨-೧೯೪೫

೭೩

ಎಲ್ಲಿ ಪೂಜೆ ನಡೆಯುತಿಹುದೊ
ಅಲ್ಲೆ ನನ್ನ ದೇಗುಲ:
ಪ್ರಾರ್ಥಿಸಿರುವುದಾರ ಹೃದಯ
ಅದುವೆ ನನ್ನ ಗುರುಕುಲ;
ದೇವರೇಗಳಾರ್ಗೆ ನೆನಪೊ
ನಾನವರ ಕುಲ!

೨೨-೩-೧೯೪೬

೭೪

ಅನ್ಯರಿಗೆ ನನ್ನಿಂದ ಅನ್ಯಾಯವಾಗುವೊಡೆ
ಅಗಲಿಸೆನ್ನನು ಅವರ ಸರಣಿಯಿಂದ;
ನಿಂದು ನಿನ್ನಡಿವುಡಿಯ ಧನ್ಯತಾದೂರದಲಿ
ವಂದಿಸುವೆ, ಓ ಗುರುವೆ, ದೈನ್ಯದಿಂದ,

೨೨-೩-೧೯೪೬

**೭೫**

ಹೊಲದಂದದಿ ಹಬ್ಬಿದೆ ದೇವರ ಮೆಯ್
ತೆನೆ ತೆನೆ ಜೋಳದ ನವಿರ್ನಿಮಿರಿ:
ತೆರೆ ತೆರೆ; ಪೊದೆ ಪೊದೆ; ಮರ ಮರವಾಗಿದೆ;
ಮೊಗವದೊ ದಿಗುತಟದೆದ್ದ ಗಿರಿ!

೮-೭-೧೯೪೬

**೭೬**

ಭುವಃ ಸ್ಥಿತ ಜಗತ್ ಪಿತ!
ಲೋಕದ ಪಥ, ಜೀವನ ರಥ,
ಸುರಕ್ಷಿತ, ಸುರಕ್ಷಿತ,
ಸರ್ವದಾ ಸರ್ವಥಾ!

೧೪-೫-೧೯೪೬

**೭೭**

ಉಸಿರು ಮನಸು ಹೊಟ್ಟೆ ಬಟ್ಟೆ
ಬಡತನಮಂ ನೀಗಲಿ;
ನಿಮ್ಮೆಲ್ಲರ ಬಾಳ ಬಟ್ಟೆ
ಬಾನ್ಮೊಗಂ ಸಾಗಲಿ.
ಅಲ್ಪದೂರವಾಗಲಿ
ಭೂಮದೆಡೆಗೆ ಬಾಗಲಿ!

೫-೧೨-೧೯೪೭

೭೮

ದೇವತೆಗಳಿಗಿದು ಸಮೆದಿಹ ನೋಟ:
ಓ ಮನುಜಾ, ಎದು ನಿನಗೆಲ್ಲೊ:
ಬರ್ದಿಲರಿಗಿಕ್ಕಿಮರ್ದಿನ ಊಟ;
ಇದು ಬರಿ ಚಂದ್ರೋದಯವಲ್ಲೊ!

೨೭-೩-೧೯೪೮

೭೯

ಈ ವೀಣೆಯ ದನಿ
ತಾಯಿಯ ಪಾದದ ಹಾದಿಯೆಳೆನ್ನನು
ಒಯ್ಯನೆ ತೇಲಿಸುತೊಯ್ಯುತ್ತಿದೆ ಆ
ದೂರದ ನಿನ್ನೆಡೆಗೆ!

೨೦-೩-೧೯೪೯

೮೦

ವಿರಹಕಿಂತ ನರಕವಿಲ್ಲ
ಮಿಲನಕಿಂತ ನಾಕವಿಲ್ಲ
ಒಲಿದ ಉಸಿರಿಗೆ!

೨೦-೩-೧೯೪೯

## ೮೧-೯೦

೮೧

ನಮಸ್ಕರಿಸು ಅಹಂಕಾರ.
ನಮಸ್ಕಾರವೆ ಉದ್ಧಾರ:

ನಮಸ್ಕಾರದ ನೈವೇದ್ಯಕೆ
ಇಳಿವನು ಜಗದಾಧಾರ!
ನಮಸ್ಕಾರಕೆ ಸೆರೆಯಾಗುವ
ಭಗವಂತನೆ ಅವತಾರ!
ನಮಸ್ಕರಿಸು, ಅಹಂಕಾರ:
ನಮಸ್ಕಾರವೆ ಉದ್ಧಾರ!

೧೦-೯-೧೯೪೯

**೮೨**

ಏಕತಾ ಅನೇಕದಿಂ
ಅನೇಕತಾ ಏಕಕೆ
ಧ್ಯೇಯಮೇಕಮಾತ್ರಮಲ್ತೆ
ವಿಕಾಸ ಶೀಲ ಲೋಕಕೆ!

೨೫-೮-೧೯೫೦

**೮೩**

ಹೇ ಅತಿಮಾನಸ ಮಸ್ತಕೇ,
ಸರ್ವಶಾಸ್ತ್ರ ಪುಸ್ತಕೇ,
ಕೊಳ್ ರಥದೆ ಚಕ್ರಮಂ
ನಿನ್ನ ದಿವ್ಯಹಸ್ತಕೆ;
ನಾ ನಿಮಿತ್ತ ಮಾತ್ರನಲ್ತೆ,
ಸಕಲ ಸೃಷ್ಟಿಸಾರಥಿ?
ಸಮರ್ಪಣಂ ಪದಕೆ, ದೇವಿ,
ಇದೆಕೊ ಹೃದಯದಾರತಿ!

೨೬-೧-೧೯೫೧

**೮೪**

ಏರು, ಏರು, ಮನವೆ, ಏರು;
ಭೂಮಿ ವ್ಯೋಮಗಳಲಿ ಹಾರು;
ಲೋಕ ಲೋಕಗಳನು ಮೀರು;
ಮಾತೃ ಚರಣತಲವ ಸೇರು;
ಏರು, ಮನವೆ, ಏರು, ಏರು!

೩೧-೧-೧೯೫೧

**೮೫**

ಬಾಳಿನಶ್ವತ್ಥಕ್ಕೆ ಭಗವಂತನೆಯೆ ಬೇರು.
ನಿಲ್ಲದೆಲ್ಲೂ ಮುಂದೆ ಸಾಗಲಿ ಬದುಕುದೇರು,
ನೂರು ಸಂದೇಹಗಳ ಸೋಪಾನಗಳನೇರು:
ಶ್ರದ್ಧೆಯಿಂ ತುದಿಗೆ ಆ ಸಿದ್ಧಿಯಂ ಸೇರು!

೨೬-೧-೧೯೫೨

**೮೬**

ನಿನ್ನ ನೆನೆವುದೆ ತಪಂ
ನಿನ್ನ ಕರೆವುದೆ ಜಪಂ
ನಿನ್ನ ಕೃಪೆಯವತರಣಕೆಮ್ಮ ಸಾಧನೆ ಬರಿ ನೆಪಂ,

೪-೩-೧೯೫೨

**೮೭**

**ಪಠ್ಯಪುಸ್ತಕದ ಪದ್ಯರಚಕನಿಗೆ**

ನಿನ್ನ ಕೀರ್ತಿ ನಿನಗೆ ನರಕ ಸದೃಶ ಕೂಪ;
ನಿನ್ನ ಕವನ ನಿನಗಪ್ಪುದೊ ಘೊರ ಪಾಪ!
ನಿನ್ನ ನಾಮ ನಿನಗೆ ಮಾತ್ರ ಇಂದ್ರಚಾಪ:

ಆ ಹೆಸರ ಹೆಮ್ಮೆಗೇಕೆ
ಈ ಮಕ್ಕಳಿಗೀ ದುಸ್ತರ
ಕ್ರೂರಶಾಪ:
ಕವನ ಪತನದೊಂದು ಕಠಿನ ಮರುನೀರಸ ತಾಪ?

೨೩-೯-೧೯೫೨

೮೮

ಹೋದ ನಾಕ ಮರಳಿತು;
ಮೋದ ಕಮಲವರಳಿತು:
ಹರಸೆ ಬಾನ ಮಕ್ಕಳು
ಮುನಿದ ಕಾಂತೆ ನಕ್ಕಳು!

೧೫-೭-೧೯೫೩

೮೯

ಮತ್ತೆ ಮತ್ತೆ ಗೆಲ್ಲಬೇಕು;
ನಿತ್ಯ ಗೆಲ್ಲುತಿರಲೆ ಬೇಕು.
ಗೆಲ್ಲುತಿಹುದೆ ಗೆಲ್ಲ!
ನಿನ್ನ ಗೆದ್ದು ಪೂರೈಸಿದೆ
ಎಂಬ ಮಾತೆ ಸಲ್ಲ:
ಪಡೆದು, ಪಡೆದು, ಪಡೆದು ನಿನ್ನ. . . .
ಕಡೆಗೆ? — ಕಡೆಯೆ ಇಲ್ಲ!

೮-೫-೧೯೫೪

೯೦

ಕುಂಡದಲ್ಲಿ ಕಾವ್ಯ:
ಅಃ ಎನಿತು ಶ್ರಾವ್ಯ!

ದೇವನೊಂದು ದಿವ್ಯ ಕವನ
ಅವತರಣಕೆ ಈ ಭುವನ
ಬಿತ್ತಿ ಮಾತ್ರ!
ಅದನರಿಯಲೆ ಅದ ಸವಿಯಲೆ
ಕವಿಯ ಪಾತ್ರ:
ಕವಿಯೆ ಪಾತ್ರ!

೧೦-೫-೧೯೫೪

## ೯೧-೧೦೦

### ೯೧

ಬಡವ?
ವಿಪರೀತನಾದರೆ ವಡಬ!
ಬಡವ:
ತಿರುಗಿ ನಿಂತರೆ ವಡಬ!
ಬಡವ ವಡಬನಾಗುವ ತನಕ ಕಾಯಬೇಕೆ?

೧೦-೫-೧೯೫೪ ೯೨

**ಹೊನ್ನಿನ ಪ್ರಶ್ನೆಗೆ ಮಣ್ಣಿನ ಉತ್ತರ**

ಹೊನ್ನೆಂದಿತು ತಳತಳ ಮಿಂಚಿ:
"ಮೈಸೂರಿನ ಮಣ್ಣು
ಗಡಿದಾಟಲು ಹೊನ್ನು!
ಎಲೆ ಮಣ್ಣೆ,
ಏಕಿಲ್ಲಿಹೆ ನೀನಿನ್ನೂ?"
ಮಣ್ಣೆಂದಿತು ಪಸುರ್ನಗೆ ಸೂಸಿ:
"ಅದೆ ನಿನಗೆನಗಿಹ ವ್ಯತ್ಯಾಸ:
ಬೆಲೆ ಬರುವಲ್ಲಿಗೆ ನೀ ನೆಗೆವೆ;
ನಿಲೆ ಇಲ್ಲದ ನೀ ಬೆಲೆವೆಣ್ಣು!

ನಾನಿರುವಲ್ಲಿಗೆ ಬೆಲೆ ಬಹುದು;
ನೆಲೆಯಾಗಿಹ ನಾ ನೆಲವೆಣ್ಣು!"

೧೦-೫-೧೯೫೪

**೯೩**

ನಿನ್ನ ಪಾದಕೆ ನನ್ನ ಮಸ್ತಕ
ಎಟುಕುವನಿತೇ
ನನ್ನನುನ್ನತಗೊಳಿಸು, ಸಾಕು:
ಅನ್ಯಕಾರಣಕೆನ್ನ ಔನ್ನತ್ಯವನು ನಾ ಬಯಸಿದರೆ
ಅದು ಬರಿ ಅಹಂಕಾರವದಕೆ ಸೊನ್ನೆಹಾಕು!

೧೩-೪-೧೯೫೬

**೯೪**

ಏನು ಸುಮದರ, ಏನು ಸುಖಕರ,
ಏನು ರಸಮಯ ಕವಿಗೆ ಲೋಕ!
ಪೂರ್ಣಪ್ರಜ್ಞಾ ಶಿವ ಅನುಗ್ರಹ
ಹೃದಯಕೊದಗಿರೆ: ನಿಲವೆ ನಾಕ!

೧೩-೪-೧೯೫೬

**೯೫**

ಏನು ಸುಂದರ ಈ ತದಿಗೆ ಚಂದಿರ:
ಆಕಾಶವೆ ತಾನಾಗಿದೆ ಆನಂದ ಮಂದಿರ!

೧೪-೪-೧೯೫೬

**೯೬**

ಒಲುಮೆ ಒಂದು ದಿವ್ಯ ರಕ್ಷೆ
ಇಹ ಸಮಸ್ಯೆಗೆ:

ಮದುವೆ ಅದಕೆ ಮಧುರ ದೀಕ್ಷೆ
ಗೃಹತಪಸ್ಯೆಗೆ!

೧೯-೪-೧೯೫೬

೯೭

ಅದಕೆ ಏಕೆ ಅಂಜಿಕೆ?
ಮರಣ ನಿನ್ನ ಚರಣದೆಡೆಗೆ
ತೆರೆವ ಬಾಗಿಲಾಗಿರೆ,
ಶರಣಗೇಕೆ ಅಂಜಿಕೆ?

೧೯-೪-೧೯೫೬

೯೮

**ಮಾನಸಗಂಗೋತ್ರಿಯಲ್ಲಿ ಶ್ರಾವಣಹೊತ್ತಾರೆ**

ಕೆಂಪು ಕೊಕ್ಕಿನಾ ಹಸುರು ಪುಕ್ಕದಾ
ವಿಹಗ ಬಾಣ ದಂಡು
ಆಕಾಶವೆಲ್ಲ ಗಿಲಿಗಿಚ್ಚಿಯಾಗೆ
ಹೋಯ್ತು ಗಿಣಿಯ ಹಿಂಡು:
ಐವತ್ತು ವರ್ಷ ಐದಾಗಿ ಹೋಗಿ
ಕಂಡು ಕಂಡು ಕಂಡು,
ಕವಿ ಬೆರಗಿ ಬಡಿದು, ಕುಲಪತಿಯು ಕೆಡೆದು,
ಹಸುಳೆತನದ ಬೆಂಡು
ತೇಲಿ ರಸಧಿಯಾ ಶಿಶುಸಮಾಧಿಯಲಿ
ಮಗ್ನ, ಮಧುವನುಂಡು!

೨೦-೯-೧೯೫೬

೯೯

ಆ ಚರಂಡಿಯ ನೆನೆವುದೇತಕೀ
ಮಲ್ಲಿಗೆಯ ಹೊದರೆಡೆಯೆ ನಿಂತು?
ಅಲ್ಲಿ ದುರ್ನಾತವಿರೆ ಇದನೂ
ಅದನೆ ಗ್ಯೆದರೆ ಏನು ಬಂತು?

೧೬-೧೨-೧೯೫೬

೧೦೦

ಮರದ ಬುಡದ ಈ ರಾಕರಿಯಲ್ಲಿ
ದೇವಿಯ ಆವಿರ್ಭೂತಿಯೆ ತಾನು
ಉದ್ಭವಿಸಿದೆ ಹೂವಿನವೋಲ್: ಲಿಲ್ಲಿ!
ಅಂದಾ ಕಂಭವನೊಡೆದ್ಯೆತಂದುದು ಅತಿಶಯವೆನು?

೧೭-೪-೧೯೫೭

## ೧೦೧-೧೧೦

೧೦೧

ನಡೆದನು ಬೋಗನವಿಲೆಯಡಿಗೆ;
ಹರೆ ಸೋಂಕಿತು ಮುಡಿಗೆ:
ತಾಯಿಯ ಹೂವಿನ ತೋಳ್
ಹರಸಿರೆ ತಲೆಮುಟ್ಟಿ
ಅರಳಿತು ದಿಟ್ಟಿ,
ಅರಳಿತು ಬಾಳ್!

೨೯-೧-೧೯೫೮

೧೦೨

ತಂಗಿಯ ಮನೆ: ಏನು ತಂಪು!
ಹೆಸುರು ಏನೊ: ಕೊಳ್ಳಿಬೈಲು!
ಆದರೂ
ಮನಗೆ ಮೈಗೆ ಜೀವಕೆಲ್ಲ,
ನಡುಹಗಲಲಿ ಸುಡುಬಿಸಿಲಲಿ
ಹೊಂಗೆಯ ನೆರಳೆಂತೊ ಅಂತೆ,
ತಂಗಿಯ ಮನೆ — ತಂಪು!

೨೭-೨-೧೯೫೮

೧೦೩

ಅಲ್ಪ ನಾನು ಎಂದು ಕುಗ್ಗಿ
ಮುದುಗ ಬೇಡವೋ:
ಓ ಅಲ್ಪವೆ,
ಅನಂತದಿಂದ ಗುಣಿಸಿಕೊ;
ನೀನ್ ಅನಂತವಾಗವೆ!

೨೩-೩-೧೯೫೮

೧೦೪

ವಿಭಾಗಿಪುದೊ ಅಹಂಕಾರ;
ಧ್ಯಾನಿಸುವುದೆ ಗುಣಾಕಾರ!
ಅಹಂಕಾರದಲ್ಪತೆಯನು
ಅನಂತ ಧ್ಯಾನದಿ
ಗುಣಾಕರಿಸಿ ವಿಸರ್ಜಿಸುತೆ,
ಆಹ್ವಾನಿಸು ಭುಮತೆಯನು
ಪ್ರದೀಪ್ತ ಜ್ಞಾನದಿ!

೨೩-೩-೧೯೫೮

**೧೦೫**

ಅಲ್ಪ ಸಂಖ್ಯೆಯಾದರೇನು?
ಮಹಾ ಸಂಖ್ಯೆಯಾದರೇನು?
ಅನಂತದಿಂದ ಗುಣಿಸಲು
ಅನಂತವಾಗುವಂತೆ, ನೀನು
ನೆನೆಯಲಾ ಅನಂತನ
ಆಗುವೆ ‘ಅನಂತ ನಾ!’

೨೩-೩-೧೯೫೮

**೧೦೬**

ನಿನ್ನ ಕೃಪೆಯ ಖರ್ಪರ
ಸದಾ ರಕ್ಷೆಯಾಗಲಿ:
ವಿಪನ್ನದೀ ಪ್ರವಾಹಕೆ
ಬದುಕು ಬಂಡೆವೋಗಲಿ!
ಬೆಂಡಿನಂತೆ ತೇಲಲಿ;
ಜೊಂಡಿನಂತೆ ಬಾಗಲಿ;
ಉರಿವ ಉಂಡೆ ಕರ್ಪೂರ
ಕೆಂಡದೋಣಿಯಾಗಲಿ!
ದೂರ ಕರೆವ ನಿನ್ನ ಅಡಿಯೆ
ಕಡಲ ದಂಡೆಯಾಗಲಿ!

೧೯-೩-೧೯೫೯

**೧೦೭**

**ಕೆಟ್ಟ ಕನಸು**

ಕರ್ಮದ ಕೇಡೇನಿದ್ದರೂ
ಕನಸಿನಲ್ಲೆ ಕಳೆಯಲಿ;

ಧರ್ಮದ ಲೇಸೇನಿದ್ದರೂ
ನನಸಿಲನಲ್ಲೆ ಬೆಳೆಯಲಿ.

೨೧-೩-೧೯೫೯

೧೦೮

ಮಲ್ಲಿಗೆಯ ಹೋವಿಂದ ಮನೆಯೆಲ್ಲ ಘಂ!
ಮುಡಿಯುವವಳಿಲ್ಲದೆಯೆ ಮನ ಬೆಕೋ ಬಿಂ!

೧೯-೫-೧೯೫೯

೧೦೯

ತನ್ನ ಮನೆಯನು ತಾನೆ ಹೊತ್ತಲೆವ ಓಡುಹುಳು
ಎಲ್ಲಿದ್ದರೇನು? ಎಂತಿರಲೇನು? ಇಚ್ಚೆ ಬರೆ
ಒಲಹೊಕ್ಕ ರಕ್ಷಣೆಯ ಪಡೆವುದಲ್ತೆ?

೨೬-೮-೧೯೫೯

೧೧೦

ಅಪಕಾರ ಮಾಡದಿರು, ಅದಕಿಂತಲೂ ಬೇರೆ
ಉಪಕಾರವನು ಬಯಸೆ ನಿನ್ನಿಂದ ನಾನು:
ಅಪಕಾರ ಮಾಡದಿರುವುದೆ ಪರಮ ಉಪಕಾರ!

೨೬-೮-೧೯೫೯

## ೧೧೧-೧೨೦

೧೧೧

**ವಿಶ್ವವಿದ್ಯಾ ಪ್ರತಿಮೆ**

ಪ್ರಶ್ನೆಯಿಂದೆ ಅಶ್ಚರ್ಯಕೆ
ಆಶ್ಚರ್ಯದಿಂದ ಪ್ರಶ್ನೆಗೆ
ಉಭಯ ಮಧ್ಯೆ ಚಲಿಪ ವಿದ್ಯೆ
ಪೂರ್ಣೆ ಶೂನ್ಯೆ ಕುಂಡಲಿನೀ!

೨೨-೯-೧೯೫೯

೧೧೨

ಮಗ್ಗಲಲಿ ಮಲಗಿರಲು ನೀನು
ಸಗ್ಗವೆಲ್ಲವ ಹುಡುಕಿ ದಣಿವೆ!
ಕಂಡಡಿಯ ಕಡೆಗಣಿಸಿ ನಾನು
ಕಾಣದಿಹ ಪಾದಕ್ಕೆ ಮಣಿವೆ!

೧೯-೨-೧೯೬೦

೧೧೩

**ದ್ವಿಜ**

"ಹದ್ದೂ ದ್ವಿಜ; ಹಾವೂ ದ್ವಿಜ;
ಅಂತೆ ಕಣಾ ನಾನೂ ದ್ವಿಜ!"
"ನಿಜ ನಿಜ; ನಜವೊ ನಿಜ:
ಹಾರಿಯೊ ಆಕಾಶಕೆ
ಹೊರಳಿಯೊ ಪಾತಾಳಕೆ
ಅಂತೊ ಇಂತೊ ಮಾಳ್ಪೆ ಮಜಾ!

೧೪-೩-೧೯೬೦

೧೧೪

**ಮೊದಲ ಮಳೆ**

ರೂಪಾತರ ಕೃಪೆ ನೆಲಕಿಳಿಯೆ
ಮಳೆ ಅಂದರೆ ಏನ್ ಬರಿ ಮಳೆಯೆ?

ಪುಲಕಿಸೆ ನನ್ನ ಮನ
ಇದು ಶ್ರೀ ಆಗಮನ!

೨೧-೩-೧೯೬೦

೧೧೫

ಕವಿಯ ಮನ ನಂದನವನ;
ಆನಂದದ ರಸನಿಕೇತನ:
ಅಲ್ಲಿ ಪಾಪವೂ ಪುಣ್ಯದ ವಾಹನ;
ಅಲ್ಲಿ ದುಃಖವೂ ಸುಖದ ಜವಾನ;
ಅಲ್ಲಿ ಸಾವೂ ಅಮೃತಯಾನ!

೯-೫-೧೯೬೦

೧೧೬

**ತಾಯಿಗೆ ಮೊರೆ**

ಕೇಡನೆಲ್ಲ ಭಕ್ಷಿಸು;
ಕಿವಿಯ ಹಿಂಡಿ ಶಿಕ್ಷಿಸು;
ರಟ್ಟೆ ಹಿಡಿದು ರಕ್ಷಿಸು:
ಕೃಪಣೆಯಾಗಬೇಡ, ಅಮ್ಮ,
ಓ, ಕೃಪಾಕಟಾಕ್ಷಿಸು!

೨೩-೯-೧೯೬೦

೧೧೭

**ಈಗ ತಿಳಿಯಿತು**

ನನ್ನ ನಿನ್ನಯ ನಡುವೆ
ಏಕೆ ಈ ಪೂಜಾರಿ?
ನಮ್ಮ ಪೂಜೆಗೆ ಇವನೆ
ಅರಿ: ಅದಕೆ ಪೂಜಾರಿ!

೩-೧೦-೧೯೬೦

೧೧೮

ಮೂಡಿತ್ತೈಕಿಲಿಂಗಳ
ಬಾನ ಹಣೆಯ ಮಂಗಳ;
ಕಾಣು ಹುಣಿಮೆ ತಿಂಗಳ;
ತಣಿಸು ನಿನ್ನ ಕಂಗಳ!

೨-೧-೧೯೬೧

೧೧೯

ಹಸರು, ಬಿಸಿಲು, ಇಬ್ಬನಿ;
ಅಲ್ಪ ಇಷ್ಟೆ ಸಾಕು ನನಗೆ
ಭೂಮದ ಅನುಭೂತಿಗೆ;
ಸಮಸ್ತವೂ ಚೇತನವೂ
ಶುಕ್ತಿಯಾಗೆ ಸ್ವಾತಿಗೆ!

೧೫-೧-೧೯೬೧

೧೨೦

**ಬೆಳ್ಳಕ್ಕಿಯ ಗೊತ್ತು**

ಹೊಳೆಯ ನಡುಗಡ್ಡೆ ಹಸುರಲಿ ಬಿಳಿಯ ಡಂಡು:
ಮರವೆ ಹೂಬಿಟ್ಟಂತೆ ಬೆಳ್ಳಕ್ಕಿ ಹಿಂಡು!

೧೮-೧-೧೯೬೧

## ೧೨೧-೧೩೦

೧೨೧

**ಭಗವಂತನಿಗೆ ಭಕ್ತಿ**

ನಾನು
ಬೆಂಕಿಯ ಕಡ್ಡಿ.
ನನ್ನ ಭಕ್ತಿ
ಬೆಂಕಿಕಡ್ಡಿ ಗೀಚಿಕೆ:
ನೀನು
ಸಿಡಿಮದ್ದಿನ ರಾಶಿ.
ನಿನ್ನ ಸೋಂಕಲು ನನ್ನ ಭಕ್ತಿ
ಕಾರಣಕೆ ಕೋಟಿಮಡಿ ಮಿಂಚಿ ಶಕ್ತಿ
ಜ್ವಲಿಸುತಿದೆ ಜ್ಯೋತಿವಾರಾಶಿ!

೩-೩-೧೯೬೧

೧೨೨

ಕಾವ್ಯಪ್ರಜ್ಞಾರಸನೆಯ ಮೆಲೆ
ಹರಿಯುತ್ತಿದೆ ಲೋಕದ ಮಧುಲೀಲೆ:
ಸಹೃದಯ ಉದ್ಯಾನದ ಹೂಮಾಲೆ
ರಾಶಿಯೆ ಬಿದ್ದಿವೆ, ಹಾವುಗಳೋಲೆ,
ಕವಿಯ ಸಮಾಧಿಯ ಹುತ್ತದ ಮೇಲೆ!

೭-೪-೧೯೬೧

೧೨೩

**ಒಂದು ನೋಟ**

ಎರಡು ಮರಗಳ ನಡುವೆ ಆಗಸದ ಓಣಿ:
ತೇಲಿತ್ತು ಪಾಡಿವದ ಚಂದಿರನ ದೋಣಿ!

೧೫-೬-೧೯೬೧

೧೨೪

ಅಕ್ಕರೆ
ಹಾಲು ಜೇನು ಸಕ್ಕರೆ
ಬೆರಿಸಿದಂತೆ:
ಒಲುಮೆ ನಲಿದು ನಕ್ಕರೆ!

೫-೭-೧೯೬೧

೧೨೫

ಹೊಜೀವನ ಹೊನ್ನಾಗಲಿ:
ಹಸನಾಗಲಿ, ರಸವಾಗಲಿ,
ಶುಭವಾಗಲಿ, ಸುಖವಾಗಲಿ,
ಹೂವಾಗಲಿ,
ಹಣ್ಣಾಗಲಿ,
ಶ್ರೀಯಾಗಲಿ ನಿಮಗೆ!

೫-೭-೧೯೬೧

೧೨೬

ನೀನು ನನ್ನೊಡನಿರುವೆ ಎಂದು ನೆನೆದಾಗ
ಮನದ ದುಗುಡದ ಮಂಜು ಸರಿಯುವುದು ಬೇಗ;
ಹಿಂಗುವುದೊಡನೆ ಬಾಳಿನೆಲ್ಲ ಉದ್ವೇಗ,
ಶಾಂತಿ ತುಂಬುವುದಾತ್ಮಕಾದಂತೆ ಯೋಗ,
ನಿನ್ನ ಬೆಂಬಲವಿರುವ ನಂಬುಗೆಯ ಧೈರ್ಯ
ಮೂಡಿ ನನಗೊದಗುವುದು ಮೇರು ಸುಸ್ಥೈರ್ಯ!

೨೫-೧೨-೧೯೬೧

೧೨೭

**ನಮ್ಮ ದೇವರಮನೆ**

ಇಲ್ಲೆ ಗಂಗಾತೀರ; ಇಲ್ಲೆ ಹಿಮಗಿರಿ ಪಾರ;
ಇಲ್ಲಿಯೆ ಕಣಾ ಆ ಹರಿದ್ವಾರ!
ಇಲ್ಲೆ ವಾರಾಣಾಸಿ; ಇಲ್ಲಿಯೆ ಹೃಷಿಕೇಶ;
ಇಲ್ಲೆ ಇದೆ ಮುಕ್ತಿಗೆ ಮಹಾದ್ವಾರ!
ದಕ್ಷಿಣೇಶ್ವರವಿಲ್ಲಿ; ರಾಮೇಶ್ವರವು ಇಲ್ಲಿ;
ಎಲ್ಲ ತೀರ್ಥಗಳಿಲ್ಲಿ; ಪುಣ್ಯ ಕ್ಷೇತ್ರಗಳಿಲ್ಲಿ;
ಇಲ್ಲಿಹನು ಸರ್ವ ದೇವಾವತಾರ!
ಅಲ್ಲಿಗಿಲ್ಲಿಗೆ ಏಕೆ ಸುಮ್ಮನಲೆಯುವೆ ದೂರ ದೂರ?
ಇಲ್ಲೆ ಓಂ ಪೂರ್ಣಮಿದೆ: ಓ ಮನವೆ ಓ ಬಾರ ಬಾರ!

೭-೧-೧೯೬೨

೧೨೮

ದೊರೆ ಮತ್ತು ಪುರೋಹಿತ
ಕೂಡಿದಾಗ ಹುಟ್ಟಿತು ಮತ!
ಮೊದಲ ಠಕ್ಕ ಮೊದಲ ಬೆಪ್ಪ
ಕೂಡಿದಾಗ ಮೂಡಿತು ಮತ!
ಯಾವುದನೃತ? ಯಾವುದು ಋತ?
ಅಂತೂ ನಡೆಯಿತದ್ಭುತ!

೧೮-೧-೧೯೬೨

೧೨೯

**ಫಾಲ್ಗುಣ ಪ್ರಭಾತರವಿ ದರ್ಶನ**

ಮಗುವಾಗು, ಮಗುವಾಗು, ಮಗುವಾಗು, ಓ ನನ್ನ ಹೃದಯ;
ಭಗವದವತಾರವಾಗುವುದು ನಿನಗೆ ಈ ಸೂರ್ಯೋದಯ!
ಜಗದ ಜನನಿಯ ಕನಕವಕ್ಷೋಜವಾಗುವುದು ರವಿಯ ಬಿಂಬ:
ಕಣ್ ಮೊಗೆದು, ಬಗೆ ಈಂಟೆ, ಜೀವ ತಾನಾಗುವುದೊ ಅಮೃತಕುಂಭ!

೨೨-೧-೧೯೬೨

೧೩೦

ಇದು ಸೆಳೆವುದೆ ನನ್ನ
ಬರಿ ಕಣ್ಣ?
ಈ ಹುವಿನ ಗೊಂಚಲ ಬಣ್ಣ,
ಓ, ಅಮ್ಮನ ಆಲಿಂಗನವಣ್ಣಾ!
ಪೀಯೂಷವನೀಯುವ ಅಮ್ಮನ ವಕ್ಷಸ್ತನ್ಯ!
ಐಕ್ಯದ ಯೋಗಾಮೃತ ಪಾನದಿ ನಾ ಧನ್ಯ!

೧೭-೨-೧೯೬೨

## ೧೩೧-೧೪೦

**೧೩೧**

ಚೀಣಿಯರ ಧಾಳಿ
ಬರಿ ಹಿಮದ ಧೂಳಿ!
ತೂರಿ ಹೋಗುವುದು
ಆದರೀ ಕರಾಳಿ
ಇಂಗ್ಲೀಷಿನ ಗಾಳಿ
ಬೀಸಿ ಹೋಗುವುದೆ?
ಸ್ವಲ್ಪ ಕೇಳಿ!

೨೦-೧೧-೧೯೬೨

**೧೩೨**

ಸಾಕು, ತಾಯಿ, ಸಾಕು, ಈ ಸಾವು, ಈ ಸಾವು:
ಚೀಣೀ ಪಿಶಾಚಿಯಿಂ ಬುದ್ಧಿ ಕಲಿತೆವು ನಾವು

೨೧-೧೧-೧೯೬೨

**೧೩೩**

**ಭಾರತದ ಮಕ್ಕಳ ಆರ್ತನಾದ**

ಓ ಯಾರಾದರೂ ಬನ್ನಿ!
ಎಲ್ಲಿಂದಾದರೂ ಬನ್ನಿ!
ಏನಾದರೂ ಮಾಡಿ
ಹೆಣಹೊರೆಯ ಇಂಗ್ಲೀಷಿನಿಂದೆಮ್ಮ ಪಾರುಮಾಡಿ!

೨೯-೧೨-೧೯೬೨

**೧೩೪**

ಚೀಣೀ ರಾಕ್ಷಸ ದಳವನು ಸೀಳಿ
ಓ ಬಾ ಬಾ ಬಾ, ಹೇ ಮಹಾಕಾಳಿ!

೨೨-೧-೧೯೬೩

**೧೩೫**

ರಣ! ರಣ! ರಣ! ರಣ!
ಹಿಮಾಲಯದಿ ರಕ್ಕಸ ಗಣ
ಕುಣಿಯುತಿಹುದು ರಿಂಗಣ!
ಕೊಡು ಹಣ; ತೊಡು ಪಣ;
ತೀರಿಸು ನಡೆ ನಾಡಋಣ!

೨೨-೧-೧೯೬೩

**೧೩೬**

ಆಶ್ಚರ್ಯ ಪಡು, ಆಶ್ಚರ್ಯ ಪಡು,
ಆಶ್ಚರ್ಯ ಪಡು, ಓ ನನ್ನ ಜೀವ;
ಆಶ್ಚರ್ಯ ಪಡುವ ಶಕ್ತಿಯನು
ಕಳೆದುಕೊಂಡರೆ ನೀನು ನಿರ್ಜೀವ!

೨೨-೧-೧೯೬೩

**೧೩೭**

ಮಲಗಿರೆ ಕಲಿಯುಗ;
ಕುಳಿತರೆ ದ್ವಾಪರ;
ನಿಂತರೆ ತ್ರೇತಾ;
ನಡೆದರೆ ಕೃತ!

೨೨-೧-೧೯೬೩

**೧೩೮**

ನಮ್ಮ ಮತ - ಭಾರತ!
ನಮ್ಮ ವ್ರತ - ಭಾರತ!
ನಮ್ಮ ಬಾಹು ರಕ್ಷಿತ
ಸುರಕ್ಷಿತ ಸುರಕ್ಷಿತ
ಅನವರತ - ಭಾರತ!

೨೨-೧-೧೯೬೩

**೧೩೯**
**ವಸಂತೋದಯ**

ಮರಗಳಲ್ಲಿ ಚಿಗುರಿಹುದು ತಳಿರ ಸೊಂಪು;
ಕೇಳುತಿದೆ ಕೋಗಿಲೆಯ ಕೊರಲ ಇಂಪು;
ತೀಡುತಿದೆ ತೆಂಕಣದ ಗಾಳಿ ತಂಪು:
ಜೀವಕ್ಕೆ ಆಹ ಇನಿಯಳ ಕದಂಪು
ಸೋಂಕಿದಂದದಿ ಸೊಗಯಿಸಿದೆ ಅಲಂಪು!

೧೨-೧-೧೯೬೩

**೧೪೦**

ನಮಮ್ಮ ಜಗದಮ್ಮ;
ಜಗದಮ್ಮ ನಮಮ್ಮ !
ನೀನಿಲ್ಲದುದು ಇಲ್ಲ;
ನೀನಲ್ಲದುದು ಇಲ್ಲ;

ನೀನೊಲ್ಲದುದು ಇಲ್ಲ!
ನೀನೊಬ್ಬಳೆಯೆ ಎಲ್ಲ;
ನೀನೊಬ್ಬಳೂ ಅಲ್ಲ!
ನನ್ನಮ್ಮ ನಾಗಿಯೂ
ಜಗದಮ್ಮ!
ಜಗದಮ್ಮ ನಾಗಿಯೂ
ನನ್ನಮ್ಮ!

೨೯-೬-೧೯೬೩

## ೧೪೧-೧೫೦

**೧೪೧**

ಉದ್ಯಾನದಲ್ಲಿ ಸದ್ಯ ಆಗಮನಿ
ನೋಡು ಈ ಗುಲಾಬಿ!
ಅತ್ಯಂತ ಈಚಿನದೊ ತಾಯಿಯೀ ಅವತಾರ:
ದೇವಿಗೆ ನಮಸ್ಕರಿಸು ಆಗು ಉದ್ಧಾರ!

೧೨-೮-೧೯೬೩

**೧೪೨**

ಇಲ್ಲಗೈಯೆ ನಿನ್ನ ನೀನು
ದೇವರಲ್ಲದುಳಿವುದೇನು?

೨೪-೮-೧೯೬೩

**೧೪೩**

ನಿನಗೆ, ಮೋಡ:
ನನಗೆ, ಅಪ್ಸರಿ!
ನಿನಗೆ, 'ಬೇಡ':
ನನಗೆ ಅಚ್ಚರಿ!

ಭಾದ್ರಪದದ ಬಾನಿನಲ್ಲಿ
ತೇಲುತಿಹಳು, ನೋಡ:
ಬರಿಯ ಮೋಡ ಎನ್ನಬೇಡ,
ವಿಜ್ಞಾನದ ಮೂಢ!

೭-೯-೧೯೬೩

**೧೪೪**

ಬೇಡ, ಬೇಡ, ಬೇಡ;
ಮಕ್ಕಳ ಈ ಕೊಲೆ ಬೇಡ!
ತುಸು ಯೋಚಿಸೊ, ಹೇ ವಿದ್ವನ್ಮೂಢ;
ತಪ್ಪಿಸೊ ಈ ಇಂಗ್ಲೀಷಿನ ಕೇಡ!

೩-೧-೧೯೬೪

**೧೪೫**

**ಲಾಂಪಟ್ಯದ ದೂರು**

ಜಿಪುಣ ದೇವರು
ಕೃಪಣ ಸೃಷ್ಟಿಗೆ!
ಚೂರೆ ಹೆಚ್ಚು ತಿಂದರೂ
ಹೊಟ್ಟೆ ಕಿಚ್ಚು ಅವನಿಗೆ:
ಬಂತು ನಮಗೆ ಹೊಟ್ಟೆನೋವು,
ಶಿಕ್ಷೆ ಅಜೀರ್ಣಕೆ!
ತುಸುವೆ ಅಧಿಕವಾಯ್ತೊ ಭೋಗ?
ಬಂತು. . .
ಬಾಳನೆಲ್ಲ ಕಹಿಗೊಳಿಸುತ್ತ. . .
ರೋಗ!
ಕ್ಷಯ! ಮೃತಭಯ!. . . .
ಒಂದೆ ಅತಿಯ ಆಲಿಂಗನ,
ಒಂದೆ ಅಧಿಕ ಚುಂಬನ,
ಬಂದೆ ಬಂತು ಬೆನ್ನ ಹಿಂದೆ

ಹೃದಯ ಸ್ತಂಭನ!. . . .
ಇಂಥ ಕೃಪಣ ಸೃಷ್ಟಿಗೆ
ಎಂಥ ಜಿಪುಣ ದೇವರೊ?

೪-೧-೧೯೭೪

**೧೪೬**

**ಪೂರ್ಣದೃಷ್ಟಿಯ ಮಹಾಕಾದಂಬರಿ**

ಸರಸ್ವತಿಯ ಸಹಸ್ರ ಬಾಹು;
ಸರಸ್ವತಿಯ ಸಹಸ್ರ ಪಾದ
ಸರಸ್ವತಿಯ ಸಹಸ್ರ ವದನ:
ನಾಟ್ಯಮಾನ ದೇವಿಗೆ
ಪೂರ್ಣದೃಷ್ಟಿಯೀ
ಕಾದಂಬರಿಯೆ ಮಹಾಸದನ!

೩೧-೩-೧೯೭೪

**೧೪೭**

**ಒಂದು ಸಂಸ್ಕೃತ ಸೂಕ್ತಿ**

ಯಾರಿಗಿರದೊ ನಿಜಪ್ರಜ್ಞೆ,
ಬಹುಶ್ರುತನೊ ಕೇವಲ,
ಸಾರೊಳಗಿಹ ಸೌಟಿನವೊಲೆ
ಶಾಸ್ತ್ರಾರ್ಥದಿ ಸುವಿಫಲ!

೫-೮-೧೯೭೪

**೧೪೮**

**ಸತಿಗೆ**

ನಿನ್ನ ಮೋಹದ ಪಾಶವೆ
ನನ್ನನೊಯ್ಯುತಿದೆ

ಮುಕ್ತಿಯೆಡೆಗೆ;
ನಿನ್ನ ಅಂಗಾಂಗದ
ಅನಂಗರಂಗದಲಿ
ನಾ ನಿರಂತರ
ರಸ ತಪಸ್ವಿ!

೨೭-೯-೧೯೬೪

**೧೪೯**

**ಪುನರ್ಭೇಟಿ*****

ಮಸಣಿತಮ್ಮ, ಮಲ್ಲಿತಮ್ಮ, ಚಾಮಯ್ಯ, ಚೌಡಯ್ಯ,
ಅಪ್ರಸಿದ್ಧರು ಇವರು, ಅಜ್ಞಾತರಿವರು,
ಇವರ ಕಾಲಡಿಯಲ್ಲಿ ನುಸುಳಲರ್ಹರೆ ಅವರು
ಆ ಕುಪ್ರಸಿದ್ಧರು, ಆ ಲೋಕ ಕುಖ್ಯಾತರಾ
ಚೆಂಗೇಷ್‌ಖಾನ್, ಘಜ್ನಿಮಹ್ಮೂದ್,
ನೆಪೋಲಿಯನ್, ಹಿಟ್ಲರ್?

೧೬-೧೦-೧೯೬೪

**೧೫೦**

ಹೂದೋಂಟದಿ ಬೇಂಟೆಯಾಡಿ
ಹಳುನುಗ್ಗುತೆ ಹುಳುವ ಹಿಡಿದು
ಟುವ್ವಿನಹಕ್ಕಿ ತನ್ನ ಮರಿಯ
ಕೊಕ್ಕಿನೊಳಗೆ ಕೊಕ್ಕನಿಟ್ಟು
ಗುಟುಕು ಕೊಡುತಿದೆ!
ಗುಣಿಸು, ಗುಣಿಸು, ಗುಣಿಸು ಗಣಿಸನಂತದಿ:
ಭೂಮಮಕ್ಕುಮೀ ಅಲ್ಪಂ, ಋಷಿಸ್ವಾಂತದಿ!

೧೨-೧೧-೧೯೬೪

---

*** ಸೋಮನಾಥಪುರ ದೇವಾಲಯಕ್ಕೆ.

೧೫೧

**ತಾರಿಣಿಯ ಕಸೂತಿ**

ಸಾಗರ ಸಾಗರ ರಸದ ನಯಾಗರ
ಧುಮ್ಮಿಕ್ಕಿದವೋಲಾಗುತಿದೆ!
ತಾರಿಣಿಯೀ ಕುಶಲ ಕಲಾ ಕಸೂತಿಗೆ
ಸೌಂದರ್ಯ ವಿಭೂತಿಗೆ
ಸ್ವರ್ಗಶ್ರೀ
ಮುಡಿಬಾಗುತಿದೆ!
ಆಗಿದೆ ಜಗಲಿಯೆ ಹಕ್ಕಿಯ ಕಾಶಿ!
ಆಗಿದೆ ಬಾಗಿಲೆ ಹೂವಿನ ರಾಶಿ!
ಹೊಂಗನಸಿಳಿದಿದೆ ನಿಜವನೆ ಮಾಸಿ,
'ಉದಯರಿವಿ'ಗೆ ನಂದನವನೆ ಬೀಸಿ!

೨೫-೧೨-೧೯೬೪

೧೫೨

**ಪೈಗಂಬರ ಸೂಕ್ತಿ**

ಭಗವಂತನ ಸಿಂಹಾಸನ
ತಲದಲ್ಲಿದೆ ಮಹದೈಶ್ವರ್ಯ:
ಕವಿಜಿಹ್ವೆಯೆ ನಿಕ್ಷೇಪಕೆ
ಬೀಗದ ಕೈ ಕಾಣಯ್ಯಾ!

೨-೧-೧೯೬೫

೧೫೩

ಅಗ್ನಿಕುಂಕುಮ ಚೆಂಡು,
ಕಾಯ್ದ ಚಿನ್ನದ ಗುಂಡು,
ಫಾಲ್ಗುಣದ ರವಿಯ ಉದಯವನು ಕವಿಯ
ಕಣ್ಣಲ್ಲ ಹೃದಯ ಕಂಡು

ಕೆಂಪಾದುದ್ಯೆ ಕೆಂಗಾಂತಿಯನೆ
ಸೌಂದರ್ಯ ಬಂಡನುಂಡು!

೨೪-೩-೧೯೭೫

**೧೫೪**

ವಿರಹಕಿಂತ ಹಿರಿಯದಿಲ್ಲ
ನರಕಯಾತನೆ:
ತನ್ನತಾನೆ ಇರಿದು ಕೊಂದ
ತಪ್ಪಿಗೆ ತನ್ನೆಡೆಗೆ ಬಂದ
ವಿರಹಿಗೊಂದು ಶಿಕ್ಷೆ ವಿಧಿಸೆ
ಯಮನೆ ಸೋತನೆ!

೧೭-೭-೧೯೭೫

**೧೫೫**
**ಷಷ್ಠಿಪೂರ್ತಿ**

ಪ್ರಲಯದಿಂದ ಸೃಷ್ಟಿಗೆ,
ಸರ್ವಕಾಮ ಇಷ್ಟಿಗೆ,
ಷಷ್ಠಿಯಿಂದ ಷಷ್ಟಿಗೆ
ಹರಿದೆ ಪೂರ್ಣದೃಷ್ಟಿಗೆ,
ತನ್ನ ತಾನೆ ತುಷ್ಟಿಗೆ!

೨೭-೮-೧೯೭೫

**೧೫೬**

**ಭಾದ್ರಪದ**

ಹಸುರು ಹಾಸಿದ ನೆಲದ
ಶಾದ್ವಲದ ಹಾಸ;
ತಿಲಕ ವೃಕ್ಷದ ಸಾಲು;
ಬುಡವೆಲ್ಲ ಹೂ ಹಾಲು:
ಭಾದ್ರಪದ ಮಾಸ!

೧೦-೯-೧೯೬೫

**೧೫೭**

**ಚುನಾವಣೆ**

ಅಂದು ಹೂವಿನ ಹಾರ,
ಇಂದು ಕಲ್ಲೇಟು:
ಏನಿದೀ ಗ್ರಹಚಾರ?
ಹಾಳು ಈ ಓಟು!

೯-೨-೧೯೬೭

**೧೫೮**

**ಫಣಿರಮಣಿ**

ಬಳೆಗಳ ಟಿಂಟಿಣಿ ನೂಪುರ ಕಿಂಕಿಣಿ
ಬಂದಳು ಕುಣಿಕುಣಿದಾ ತರುಣಿ:
ಒಲವಿನ ಕಣ್ಮಣಿ ಚೆಲುವಿನ ಹೊಂಗಣಿ
ಹೆಡೆಯಾಡುವ ಫಣಿ ಆ ರಮಣಿ!

**೧೫೯**

**ಯಂ ಶೈವಾಃ**

ಶಿವನೆಂದಾ ಶೈವರಾರನ್ ಸಮುಪಾಸಿಪರ್, ಬ್ರಹ್ಮವೆಂದಾ ವೇದಾಂತಿಗಳ್,
ಜಿನನೆಂದಾ ಜೈನಶಾಸನರತರ್, ಕರ್ತನೆಂದಾ ನೈಯಾಯಿಕರ್,
ಗುರುವೆಂದಾ ಬುದ್ಧನು ಬೌದ್ಧರ್, ಕರ್ಮವೆಂದಾ ಮೀಮಾಂಸಕರ್,
ಹರಿಯೆಂಬಾ ದೇವಂ ವಾಂಛಿತ ಫಲಂಗಳಂ ನೀಡುಗಾ ತ್ರೈಲೋಕ್ಯನಾಥಂ!

೧೬೦

**ಕೇಂದ್ರ ಆಕಾಶವಾಣಿಯಲ್ಲಿ ಸುದ್ದಿ**

“ಹತ್ತು ಸಾವಿರ ಜನರು ಅಮರನಾಥ ಗುಹೆಗೆ
ಯಾತ್ರೆ ದರ್ಶನವಿತ್ತು ಸಂದರ್ಶಿಸಿದರಂತೆ
ಐಕಿಲಿನ ಶಿವಲಿಂಗವನು ಪೂಜೆಗೈಯಲ್ಕೆ”
ಮತ್ತೆ ಅಚ್ಚರಿಯೆ ಅನ್ನ ಸಮಸ್ಯೆ ಈ ದೇಶಕ್ಕೆ?

೨೧-೮-೧೯೬೭

## ೧೬೧-೧೬೯

೧೬೧

**ಕೃಪಾಚಂಚು**

ಮಳೆಗರೆಯುವ ಕಾರ್ಮೋಡಕೆ ಎಂತೊ ಬಳ್ಳಿಮಿಂಚು,
ಅಂತೆ ಇಹುದು ಕತ್ತಲೆಗೂ ಬೆಳ್ಳಿಬೆಳಕಿನಂಚು:
ದುಃಖಗರ್ಭದಲ್ಲಿ ಹೊರೆಯುತಿಹುದೊ ಸುಖದ ಹೊಂಚು,
ಕ್ಲೇಶಾಂಡವ ಕುಕ್ಕಿ ಹೊಮ್ಮುವಂತೆ ಕೃಪೆಯ ಚಂಚು!

(ಕೌಟುಂಬಿಕ ಕ್ಲೇಶವೊಂದರಿಂದ ಪಾರಾದ ಸಂದರ್ಭದಲ್ಲಿ)

೧೭-೩-೧೯೬೮

೧೬೨

ಹಕ್ಕಿ, ಹೂವು, ಮಕ್ಕಳು
ಇರದೆ ಇದ್ದರೆ
ಆಗುತಿತ್ತು ನಮ್ಮ ಪೃಥಿವಿ
ಬರಡು ಮರುಧರೆ!

೫-೪-೧೯೭೨

**೧೬೩**

ಓಡಿ ಮೋಡಗಳೆ ಚಿತ್ರಕೂಟಕ್ಕೆ
ಬೇಕು ಮಳೆಯ ಕೃಪೆ ಕಾಫಿ ತೋಟಕ್ಕೆ:
ಅಲ್ಲಿ ನಿಮ್ಮೊಡನೆ ಮಕ್ಕಳಾಟಕ್ಕೆ
ಇಹಳು ಸುಸ್ಮಿತಾ ಚೆಲ್ವುನೋಟಕ್ಕೆ!

೧೦-೪-೧೯೭೨

**೧೬೪**

**ಓಂ**

ಇಂದುಕಲೆ ತಮಾಲೆಯೊಡನೆ
ಸುರೇಂದ್ರ ಸಂಗಿನಿ
ವಿಜಯಿಯಾಗಿ ಬೇಗ ಬರಲಿ:
ಅನುಗ್ರಹಿಸು, ದೇವಿ, ತಾಯಿ,
ಮಹಿಷ ಭಂಗಿನಿ!

(ವಿದೇಶದಿಂದ ಮಗಳು ಹಿಂದಿರುಗುವ ಸಂದರ್ಭದಲ್ಲಿ ಆಶೀರ್ವಾದ)

೪-೧೦-೧೯೭೩

**೧೬೫**

ಕರ್ನಾಟಕ: ಹಳೆಯದೆ ಅದು
ಹೊಸತಾಯಿತು ಹೆಸರು.
ತುಂಬುವುದಿದೆ ಜನಹೃದಯದ
ಭಾವೈಕ್ಯದ ಉಸಿರು,
ಕೆರೆಕಟ್ಟೆಯ ಹೊಲಗದ್ದೆಯ
ಸಿರಿದೋಂಟದ ಹಸಿರು:
ಭರತಾಂಬೆಗೆ ತಾನಾಗಲಿ
ನಾಡಿದು ಹೊಂಬಸಿರು!

೧-೧೧-೧೯೭೩

**೧೬೬**

“ನಮ್ಮ ನಾಡು ಸುಖದ ಬೀಡು
ನಿಷ್ಠೆಯಿಂದ ದುಡಿದರೆ!”
ಎಂದ ನಮ್ಮ ಮುಖ್ಯಮಂತ್ರಿ
ನಿಷ್ಠೆಯಿಂದ ನುಡಿದರೆ?

(ಗದಗಿನಲ್ಲಿ ಮುಖ್ಯಮಂತ್ರಿ ದೇವಾರಾಜ ಅರಸು ಭಾಷಣ ಮಾಡಿದ ಸಂದರ್ಭದಲ್ಲಿ)

**೧೬೭**

**ಆಪತ್ಕಾಲ**

ಬಾಯ್ಗೆ ಬಟ್ಟೆ ತುರುಕಿದಾರೆ
ಬಿಗಿದು ಕೈಯ ಕಟ್ಟಿದಾರೆ
ಗಂಟಲೊತ್ತಿ ಹಿಸುಗಿದಾರೆ!
ಸತ್ತೆ ಸತ್ತೆ ಅಯ್ಯೊ ಸತ್ತೆ:
ನಾ….ನು….ಪ್ರ….ಜಾ….ಸ….ತ್ತೆ!

(ಇಂದಿರಾಗಾಂಧಿ ತಾನು ರಾಜೀನಾಮೆ ಕೊಟ್ಟು ಸುಪ್ರೀಂ ಕೋರ್ಟಿನ ಇತ್ಯರ್ಥಕ್ಕೆ ಕಾಯುವ ಬದಲು ತುರ್ತು ಪರಿಸ್ಥಿತಿ ಘೋಷಿಸಿ ದೇಶದ ಬದಕನ್ನೇ ಗೋಳಿಗೆ ಸಿಕ್ಕಿಸುವ ಧೂರ್ತೆಯಾಗಿದ್ದಾರಲ್ಲಾ!)

೧-೭-೧೯೭೫

**೧೬೮**

**ಸರ್ವಾಧಿಕಾರಿ**

ಹತ್ತಿಯಾಯ್ತು ಹುಲಿಯ ಬೆನ್ನು:
ಮತ್ತೆ ಇಳಿವುದೆಂತು ಇನ್ನು?
ಇಲ್ಲಗೈವುದೆನ್ನ ತಿಂದು!
ಬಂದುದೆಲ್ಲ ಬರಲಿ ಎಂದು
ಕೊಂದುಕೊಂದು ನಡೆವೆ ಮುಂದು!

೨-೭-೧೯೭೫

೧೬೯

ಮತದಿಂದ ಪಾರಾಗು: ಅಧ್ಯಾತ್ಮ ಶರಣಗು!
ಮೌಢ್ಯಕ್ಕೆ ದೂರಾಗು: ವಿಜ್ಞಾನ ಮತಿಯಾಗು!

೧೨-೩-೧೯೮೨

## ೧೭೧-೧೭೯

೧೭೧

**ಕೃಪಾಚಂಚು**

ಮಳೆಗರೆಯುವ ಕಾರ್ಮೋಡಕೆ ಎಂತೊ ಬಳ್ಳಿಮಿಂಚು,
ಅಂತೆ ಇಹುದು ಕತ್ತಲೆಗೂ ಬೆಳ್ಳಿಬೆಳಕಿನಂಚು:
ದುಃಖಗರ್ಭದಲ್ಲಿ ಹೊರೆಯುತಿಹುದೊ ಸುಖದ ಹೊಂಚು,
ಕ್ಲೇಶಾಂಡವ ಕುಕ್ಕಿ ಹೊಮ್ಮುವಂತೆ ಕೃಪೆಯ ಚಂಚು!

(ಕೌಟುಂಬಿಕ ಕ್ಲೇಶವೊಂದರಿಂದ ಪಾರಾದ ಸಂದರ್ಭದಲ್ಲಿ)

೧೭-೩-೧೯೭೮

೧೭೨

ಹಕ್ಕಿ, ಹೂವು, ಮಕ್ಕಳು
ಇರದೆ ಇದ್ದರೆ
ಆಗುತಿತ್ತು ನಮ್ಮ ಪೃಥಿವಿ
ಬರಡು ಮರುಧರೆ!

೫-೪-೧೯೭೨

೧೭೩

ಓಡಿ ಮೋಡಗಳೆ ಚಿತ್ರಕೂಟಕ್ಕೆ
ಬೇಕು ಮಳೆಯ ಕೃಪೆ ಕಾಫಿ ತೋಟಕ್ಕೆ:
ಅಲ್ಲಿ ನಿಮ್ಮೊಡನೆ ಮಕ್ಕಳಾಟಕ್ಕೆ
ಇಹಳು ಸುಸ್ಮಿತಾ ಚೆಲ್ವುನೋಟಕ್ಕೆ!

೧೦-೪-೧೯೭೨

**೧೬೪**

**ಓಂ**

ಇಂದುಕಲೆ ತಮಾಲೆಯೊಡನೆ
ಸುರೇಂದ್ರ ಸಂಗಿನಿ
ವಿಜಯಿಯಾಗಿ ಬೇಗ ಬರಲಿ:
ಅನುಗ್ರಹಿಸು, ದೇವಿ, ತಾಯಿ,
ಮಹಿಷ ಭಂಗಿನಿ!

(ವಿದೇಶದಿಂದ ಮಗಳು ಹಿಂದಿರುಗುವ ಸಂದರ್ಭದಲ್ಲಿ ಆಶೀರ್ವಾದ)

೪-೧೦-೧೯೭೩

**೧೬೫**

ಕರ್ನಾಟಕ: ಹಳೆಯದೆ ಅದು
ಹೊಸತಾಯಿತು ಹೆಸರು.
ತುಂಬುವುದಿದೆ ಜನಹೃದಯದ
ಭಾವೈಕ್ಯದ ಉಸಿರು,
ಕೆರೆಕಟ್ಟೆಯ ಹೊಲಗದ್ದೆಯ
ಸಿರಿದೋಂಟದ ಹಸಿರು:
ಭರತಾಂಬೆಗೆ ತಾನಾಗಲಿ
ನಾಡಿದು ಹೊಂಬಸಿರು!

೧-೧೧-೧೯೭೩

**೧೬೬**

"ನಮ್ಮ ನಾಡು ಸುಖದ ಬೀಡು
ನಿಷ್ಠೆಯಿಂದ ದುಡಿದರೆ!"

ಎಂದ ನಮ್ಮ ಮುಖ್ಯಮಂತ್ರಿ
ನಿಷ್ಠೆಯಿಂದ ನುಡಿದರೆ?

(ಗದಗಿನಲ್ಲಿ ಮುಖ್ಯಮಂತ್ರಿ ದೇವಾರಾಜ ಅರಸು ಭಾಷಣ ಮಾಡಿದ ಸಂದರ್ಭದಲ್ಲಿ)

**೧೬೭**

**ಆಪತ್ಕಾಲ**

ಬಾಯ್ಗೆ ಬಟ್ಟೆ ತುರುಕಿದಾರೆ
ಬಿಗಿದು ಕೈಯ ಕಟ್ಟಿದಾರೆ
ಗಂಟಲೊತ್ತಿ ಹಿಸುಗಿದಾರೆ!
ಸತ್ತೆ ಸತ್ತೆ ಅಯ್ಯೊ ಸತ್ತೆ:
ನಾ….ನು….ಪ್ರ….ಜಾ….ಸ….ತ್ತೆ!

(ಇಂದಿರಾಗಾಂಧಿ ತಾನು ರಾಜೇನಾಮೆ ಕೊಟ್ಟು ಸುಪ್ರೀಂ ಕೋರ್ಟಿನ ಇತ್ಯರ್ಥಕ್ಕೆ ಕಾಯುವ ಬದಲು ತುರ್ತು ಪರಿಸ್ಥಿತಿ ಘೋಷಿಸಿ ದೇಶದ ಬದಕನ್ನೇ ಗೋಳಿಗೆ ಸಿಕ್ಕಿಸುವ ಧೂರ್ತೆಯಾಗಿದ್ದಾರಲ್ಲಾ!)

೧-೭-೧೯೭೫

**೧೬೮**

**ಸರ್ವಾಧಿಕಾರಿ**

ಹತ್ತಿಯಾಯ್ತು ಹುಲಿಯ ಬೆನ್ನು:
ಮತ್ತೆ ಇಳಿವುದೆಂತು ಇನ್ನು?
ಇಲ್ಲಗೈವುದೆನ್ನ ತಿಂದು!
ಬಂದುದೆಲ್ಲ ಬರಲಿ ಎಂದು
ಕೊಂದುಕೊಂದು ನಡೆವೆ ಮುಂದು!

೨-೭-೧೯೭೫

**೧೬೯**

ಮತದಿಂದ ಪಾರಾಗು: ಅಧ್ಯಾತ್ಮ ಶರಣಗು!
ಮೌಢ್ಯಕ್ಕೆ ದೂರಾಗು: ವಿಜ್ಞಾನ ಮತಿಯಾಗು!

೧೨-೩-೧೯೮೨

# ಮಂತ್ರಾಕ್ಷತೆ : ಮೊದಲ ಪಂಕ್ತಿಗಳ ಅಕಾರಾದಿ


| | |
|---|---|
| ೧. ಅಕ್ಕರೆ | ೪೯ |
| ೨. ಅದಕೆ ಏಕೆ ಅಂಜಿಕೆ? | ೩೮ |
| ೩. ಅಗ್ನಿಕುಂಕುಮ ಚೆಂಡು, | ೬೧ |
| ೪. ಅನ್ಯರಿಗೆ ನನ್ನಿಂದ ಅನ್ಯಾಯವಾಗುವೊಡೆ | ೩೦ |
| ೫. ಅಪಕಾರ ಮಾಡದಿರು, ಅದಕಿಂತಲೂ ಬೇರೆ | ೪೩ |
| ೬. ಅಮ್ಮನ ಮಡಿಲೊಳು ಮಲಗಿರುವೆನಗೆ | ೩ |
| ೭. ಅಲ್ಪ ನಾನು ಎಂದು ಕುಗ್ಗಿ | ೪೦ |
| ೮. ಅಲ್ಪ ಸಂಖ್ಯೆಯಾದರೇನು? | ೪೧ |
| ೯. ಅಂತದ ತುಟಿಯಲಿ ಅನಂತವೊತ್ತಿದ | ೪ |
| ೧೦. ಅಂದು ಹೂವಿನ ಹಾರ, | ೬೨ |
| ೧೧. ಆ ಚರಂಡಿಯ ನೆನೆವುದೇತಕೀ | ೩೯ |
| ೧೨. ಆಶ್ಚರ್ಯಗಳ ಮಧ್ಯೆ | ೨೬ |
| ೧೩. ಆಶ್ಚರ್ಯ ಪಡು, ಆಶ್ಚರ್ಯ ಪಡು, | ೫೩ |
| ೧೪. ಇದ್ದೊಂದು ಹೃದಯವನು ಕದ್ದೊಯ್ದೆ ನೀನು: | ೧೧ |
| ೧೫. ಇಲ್ಲಗೈಯೆ ನಿನ್ನ ನೀನು | ೫೬ |
| ೧೬. ಇಲ್ಲೆ ಗಂಗಾತೀರ; ಇಲ್ಲೆ ಹಿಮಗಿರಿ ಪಾರ; | ೫೦ |
| ೧೭. ಇದು ಸೆಳೆವುದೆ ನನ್ನ | ೫೧ |
| ೧೮. ಇಂದುಕಲೆ ತಮಾಲೆಯೊಡನೆ | ೬೫ |
| ೧೯. ಇಂದ್ರನೊಡನೆ ನಂದನದಲಿ | ೨೧ |
| ೨೦. ಈ ವೀಣೆಯ ದನಿ | ೩೧ |
| ೨೧. ಉದ್ಯಾನದಲ್ಲಿ ಸದ್ಯ ಆಗಮನಿ | ೫೫ |
| ೨೨. ಉಸಿರು ಮನಸು ಹೊಟ್ಟೆ ಬಟ್ಟೆ | ೩೦ |
| ೨೩. ಎತ್ತಣ ನೋವು? ಎಲ್ಲಿಯ ಸಾವು? | ೭ |
| ೨೪. ಎದೆಯೊಳೊಂದು ಮಸೆವ ಬಾಣ; | ೧೫ |
| ೨೫. ಎರಡು ವರಗಳ ಹಿಡಿದು ನಿಂತಿರುವೆ, ದೇವಿ; | ೬ |
| ೨೬. ಎರಡು ಮರಗಳ ನಡುವೆ ಆಗಸದ ಓಣಿ: | ೪೮ |

| | |
|---|---|
| ೨೭. ಎಲ್ಲಿ ಪೂಜೆ ನಡೆಯುತಿಹುದೊ | ೨೯ |
| ೨೮. ಏಕತಾ ಅನೇಕದಿಂ | ೩೨ |
| ೨೯. ಏನು ಸುಂದರ ಈ ತದಿಗೆ ಚಂದಿರ: | ೩೮ |
| ೩೦. ಏನು ಸುಮದರ, ಏನು ಸುಖಕರ, | ೩೭ |
| ೩೧. ಏರು, ಏರು, ಮನವೆ, ಏರು; | ೩೩ |
| ೩೨. ಏರಿತು ಇಳಿಯಿತು | ೧೮ |
| ೩೩. ಒಲುಮೆ ಒಂದು ದಿವ್ಯ ರಕ್ಷೆ | ೩೮ |
| ೩೪. ಓ ದೇವರೆ, ನೀನಿದ್ದರೆ, | ೩ |
| ೩೫. ಓಡಿ ಮೋಡಗಳೆ ಚಿತ್ರಕೂಟಕ್ಕೆ | ೬೪ |
| ೩೬. ಓ ಯಾರಾದರೂ ಬನ್ನಿ! | ೫೨ |
| ೩೭. ಕಡಲ ತೆರೆಯ ಗಾನ | ೨೪ |
| ೩೮. ಕಡಲಲೆ ದಡವನು ಬಡಿಯುವ ತೆರದಲಿ | ೩ |
| ೩೯. ಕಡೆಯ ಪುರೋಹಿತನ ಕರುಳು | ೧೦ |
| ೪೦. ಕಣಿಗಿಲೆಯ ಗಿಡದಲ್ಲಿ ಹೂ ಗೋಂಚಲಾಗರಳಿ | ೧೫ |
| ೪೧. ಕತ್ತಲೆಯ ಕೊಲೆಗೈವ ಕಾಂತಿಖಡ್ಗದ ವೀರ. | ೨೪ |
| ೪೨. ಕನಸನೆಳೆದು ತಂದು ತಿರೆಗೆ | ೯ |
| ೪೩. ಕರ್ನಾಟಕ: ಹಳೆಯದೆ ಅದು | ೬೫ |
| ೪೪. ಕರ್ಮದ ಕೇಡೇನಿದ್ದರೂ | ೪೨ |
| ೪೫. ಕಲೆ ಹಡೆದ ಕಲ್ಪನೆಯೆ | ೨೦ |
| ೪೬. ಕವಿಗೆ ಕರ್ಣಂ ಪ್ರಮಾಣಂ | ೨೩ |
| ೪೭. ಕವಿಯ ಮನ ನಂದನವನ; | ೪೫ |
| ೪೮. ಕಾಡಿಸುವ ಕಾಡುದೇವತೆಗೆ ಹೊಗಳಿಕೆ ಬೇಕು; | ೧೨ |
| ೪೯. ಕಾಲವೆಂದರೆ ಏನು? ರವಿಯ ದೂರಕೆ ನಾನು | ೮ |
| ೫೦. ಕಾಲಿಲ್ಲದಾ ಅಶ್ವ | ೨೬ |
| ೫೧. ಕಾವ್ಯಪ್ರಜ್ಞಾರಸನೆಯ ಮೆಲೆ | ೪೮ |
| ೫೨. ಕೇಡನೆಲ್ಲ ಭಕ್ಷಿಸು; | ೪೫ |
| ೫೩. ಕುಂಡದಲ್ಲಿ ಕಾವ್ಯ: | ೩೫ |
| ೫೪. ಕೆಂಪು ಕೊಕ್ಕಿನಾ ಹಸುರು ಪುಕ್ಕದಾ | ೩೮ |
| ೫೫. ಗಾನಮಧು ತುಂಬಿ ಸಿಡಿಯುವ ತಂತಿ ಮಿಡಿಯಲ್ಕೆ | ೨೫ |
| ೫೬. ಗೇರುಸೊಪ್ಪೆಯ ಮಹಾ ಜಲಪಾತವನು ನೋಡಿ | ೧೨ |
| ೫೭. ಗೋ ಕಾಕ ವಿಕೃತಗಳ್ ಕಾಲ್ಗೊಳೆ ಚಿಕಿತ್ಸೆಯಂ, | ೨೩ |

| | |
|---|---|
| ೫೮. ಗೋಡೆ ಗೋಡೆಯ ನಡುವಣೆದೆ ಸಾರ್ಥಕಂ | ೨೫ |
| ೫೯. ಚೆಲುವೆ ಬಿಸುಪು, ಕವಿಯೆ ಬೆಣ್ಣೆ, | ೧೦ |
| ೬೦. ಚೇಣಿಯರ ಧಾಳಿ | ೫೧ |
| ೬೧. ಚೇಣೀ ರಾಕ್ಷಸ ದಳವನು ಸೀಳಿ | ೫೩ |
| ೬೨. ಜಿಪುಣ ದೇವರು | ೫೭ |
| ೬೩. ತನ್ನ ಮನೆಯನು ತಾನೆ ಹೊತ್ತಲೆವ ಓಡುಹುಳು | ೪೩ |
| ೬೪. ತುತ್ತತುದಿಯ ಮೌನಕೇಕೆ | ೫ |
| ೬೫ ತೇಜಕ್ಕೆ ನೀ ತೇಜವೆನ್ನೊಳುದ್ಭವಿಸು ಬಾ; | ೨೭ |
| ೬೬. ತಂಗಿಯ ಮನೆ: ಏನು ತಂಪು! | ೪೦ |
| ೬೭. ದೇವತೆಗಳಿಗಿದು ಸಮೆದಿಹ ನೋಟ: | ೩೧ |
| ೬೮. ದೊರೆ ಮತ್ತು ಪುರೋಹಿತ | ೫೦ |
| ೬೯. ನಡೆದನು ಬೋಗನವಿಲೆಯಡಿಗೆ; | ೪೦ |
| ೭೦. ನನ್ನ ನಿನ್ನಯ ನಡುವೆ | ೪೬ |
| ೭೧. ನನ್ನ ಮನಮಂದಿರವನೆಲ್ಲ ನೀ ತುಂಬಿರುವೆ; | ೬ |
| ೭೨. ನಮಮ್ಮ ಜಗದಮ್ಮ; | ೫೫ |
| ೭೩. ನನ್ನಿಂದ ನೀನೆನಿತು ದೂರ ಓಡಿದರೇನು? | ೧೩ |
| ೭೪. ನಮ್ಮ ಕಾಲೇಜಿನಲಿ ದಿನವೂ ಕಲಸ ನಡೆಯುತಿದೆ: | ೨೨ |
| ೭೫. “ನಮ್ಮ ನಾಡು ಸುಖದ ಬೀಡು | ೬೬ |
| ೭೬. ನಮ್ಮ ಮತ - ಭಾರತ! | ೫೪ |
| ೭೭. ನಮಸ್ಕರಿಸು ಅಹಂಕಾರ. | ೩೨ |
| ೭೮. ನಾ ನಡೆದ ಹಾದಿಯನು ಹಿಂತಿರುಗಿ ನೋಡಿದರೆ | ೧೩ |
| ೭೯. ನಾ ನಿನ್ನನೊಲಿದಿಹುದು ನಿನ್ನ ಚೆಲುವಿಕೆಗಲ್ಲ, | ೧೦ |
| ೮೦. ನಾನು | ೪೭ |
| ೮೧. ನಾನು ಮಾದಿದೆನೆಂಬ ಬಲೆಯಲಿ | ೧೬ |
| ೮೨. ನಿನಗೆ ತಿಳಿವುದೆಂತು ನನ್ನ | ೨೪ |
| ೮೩. ನಿನಗೆ, ಮೋಡ: | ೫೬ |
| ೮೪. ನಿನ್ನ ಕೀರ್ತಿ ನಿನಗೆ ನರಕ ಸದೃಶ ಕೂಪ; | ೩೪ |
| ೮೫. ನಿನ್ನ ಕೃಪೆಯ ಖರ್ಪರ | ೪೨ |
| ೮೬. ನಿನ್ನ ಚೆಲುವು ನಿನಗೆ ಅಲ್ಲ, | ೮ |
| ೮೭. ನಿನ್ನ ದೇಹದ ಪಾಪವೆಲ್ಲವು | ೫ |
| ೮೮. ನಿನ್ನ ನೆನೆವುದೆ ತಪಂ | ೩೪ |

| | |
|---|---|
| ೮೯. ನಿನ್ನ ಪಾದಕೆ ನನ್ನ ಮಸ್ತಕ | ೩೭ |
| ೯೦. ನಿನ್ನ ಮಹದಿಚ್ಛೆಗೆ | ೧೯ |
| ೯೧. ನಿನ್ನ ಮೋಹದ ಪಾಶವೆ | ೫೮ |
| ೯೨. ನಿರುಪಮನೆ ಜೋ! | ೧೭ |
| ೯೩. ನೀ ಕಲಿಸಿದುಲಿಯನ್ನೆ ನಾನುಲಿಯಲೊಮ್ಮೊಮ್ಮೆ | ೪ |
| ೯೪. ನೀನು ನನ್ನೊಡನಿರುವೆ ಎಂದು ನೆನೆದಾಗ | ೪೯ |
| ೯೫. ನೀನಾತ್ಮಂ; ಮತಿ ಗಿರಿಜೆ; ಸಹಚರರ್ ಪ್ರಾಣಗಳ್; | ೨೭ |
| ೯೬. ನೀ ನಿಯಂತೃ, ನಾನೆ ಯಂತ್ರ; | ೨೯ |
| ೯೭. ನೀನು ಬಳಿಯಿರೆ ಸುಗ್ಗಿಯು, | ೧೧ |
| ೯೮. ನೀಲ ನಭವ ನೋಡಿ ನೋಡಿ | ೫ |
| ೯೯. ನೂರಾರು ಮತಭಕ್ತರೊಣಗು ನಂಬುಗೆಗಿಂತ | ೭ |
| ೧೦೦. ನೂರು ರೂಪದಿ ನಿಂದು ಕಣ್ಗೆ ಮೆರೆಯುವೆ ನೀನು | ೬ |
| ೧೦೧. ಪೇಳರ್ಥವಾಗುವುದೆ ಮಣ್ಣೊಡ್ಡರಿಗೆ ಕಾವ್ಯಸೃಷ್ಟಿ? | ೨೨ |
| ೧೦೨. ಪ್ರಲಯದಿಂದ ಸೃಷ್ಟಿಗೆ, | ೬೧ |
| ೧೦೩. ಪ್ರಶ್ನೆಯಿಂದೆ ಅಶ್ಚರ್ಯಕೆ | ೪೩ |
| ೧೦೪. ಪ್ರೇಮವೆ ಶಿವ ಶಿವನೇ ಪ್ರೇಮ; | ೧೯ |
| ೧೦೫. ಬಡವ? | ೩೬ |
| ೧೦೬. ಬಳೆಗಳ ಟಿಂಟಿಣಿ ನೂಪುರ ಕಿಂಕಿಣಿ | ೬೩ |
| ೧೦೭. ಬಾಯ್ಗೆ ಬಟ್ಟೆ ತುರುಕಿದಾರೆ | ೬೬ |
| ೧೦೮. ಬಾಳಿನಶ್ವತ್ಥಕ್ಕೆ ಭಗವಂತನೆಯೆ ಬೇರು. | ೩೩ |
| ೧೦೯. ಬಿಡು ಸಾಕೀ ಹುಡುಗಾಟದ ದೃಷ್ಟಿ; | ೧೬ |
| ೧೧೦. ಬುದ್ಧಿಯೀಟಿಯ ಮೊನೆಯ ತುದಿಯಲಿ | ೧೪ |
| ೧೧೧. ಬೇಡ, ಬೇಡ, ಬೇಡ; | ೫೬ |
| ೧೧೨. ಬಿಂದು ಬಿಂದು ಸೇರಿ ಸಿಂದು: | ೨೮ |
| ೧೧೩. ಭಗವಂತನ ಸಿಂಹಾಸನ | ೬೦ |
| ೧೧೪. ಭವಬಂಧನವನು ಸವಿಗೊಳಿಸಯ್: | ೨೦ |
| ೧೧೫. ಭುವಃ ಸ್ಥಿತ ಜಗತ್ ಪಿತ! | ೩೦ |
| ೧೧೬. ಭೂಮ ಸತ್ಯವನಲ್ಪ ತರ್ಕದೊಳಗಿಟ್ಟು | ೨೨ |
| ೧೧೭. ಮಗುವಾಗು, ಮಗುವಾಗು, ಮಗುವಾಗು, ಓ ನನ್ನ ಹೃದಯ; | ೫೧ |
| ೧೧೮. ಮಗ್ಗಲಲಿ ಮಲಗಿರಲು ನೀನು | ೪೪ |

| | |
|---|---|
| ೧೧೯. ಮತದಿಂದ ಪಾರಾಗು: ಅಧ್ಯಾತ್ಮ ಶರಣಗು! | ೬೭ |
| ೧೨೦. ಮತ್ತೆ ಮತ್ತೆ ಗೆಲ್ಲಬೇಕು; | ೩೫ |
| ೧೨೧. ಮನಸಿಗೆ ಮೈಲಿಗೆಯಾಗಿದೆ, ಗುರುವೇ: | ೧೮ |
| ೧೨೨. ಮನೆಯ ಹೊರಗೋ ಹಸುರು ಹೊಲವು; | ೧೩ |
| ೧೨೩. ಮಮ ಮಾಯಾಮಯ ಮನಮಂದಿರದಲಿ | ೪ |
| ೧೨೪. ಮರಗಳಲ್ಲಿ ಚಿಗುರಿಹುದು ತಳಿರ ಸೊಂಪು; | ೫೪ |
| ೧೨೫. ಮರದ ಬುಡದ ಈ ರಾಕರಿಯಲ್ಲಿ | ೩೯ |
| ೧೨೬. ಮಲಗಿರೆ ಕಲಿಯುಗ; | ೫೪ |
| ೧೨೭. ಮಲರುತಿದೆ ಕಣ್ಣೀರ ಕೆರೆಯಲ್ಲಿ ನಗೆದಾವರೆಯ ಮುಗುಳು; | ೧೫ |
| ೧೨೮. ಮಲ್ಲಿಗೆಯ ಹೋವಿಂದ ಮನೆಯೆಲ್ಲ ಘಂ! | ೪೨ |
| ೧೨೯. ಮಸಣಿತಮ್ಮ, ಮಲ್ಲಿತಮ್ಮ, ಚಾಮಯ್ಯ, ಚೌಡಯ್ಯ, | ೫೯ |
| ೧೩೦. ಮಳೆಗರೆಯುವ ಕಾರ್ಮೋಡಕೆ ಎಂತೊ ಬಳ್ಳಿಮಿಂಚು, | ೬೪ |
| ೧೩೧. ಮಾತು ನನ್ನ ಕಲೆ, | ೨೦ |
| ೧೩೨. ಮುಗಿಯಿತಿಂದಿಗೊಂದು ವರುಷ: | ೧೬ |
| ೧೩೩. ಮುಟ್ಟಿಸೊಂಡಿಲನು ಮುಂಡಿಗೆ ಎಂಬ, | ೮ |
| ೧೩೪. ಮೂಡಿತ್ತೈಕಿಲಿಂಗಳ | ೪೬ |
| ೧೩೫. ಮೆಚ್ಚಿನ ಗಿಡಗಿಡಕೂ ಒಯ್ದು | ೧೭ |
| ೧೩೬. ಮೋಕ್ಷಪತಿ ನೀಂ; ನಿನ್ನ ಬಲ ತಪ್ಪಿದರೆ ನನಗೆ | ೧೯ |
| ೧೩೭. ಯಾರಾಗಿರು ನೀ, ಏನಾಗಿರು ನೀ, | ೯ |
| ೧೩೮. ಯಾರಿಗಿರದೊ ನಿಜಪ್ರಜ್ಞೆ, | ೫೮ |
| ೧೩೯. ರಣ! ರಣ! ರಣ! ರಣ! | ೫೩ |
| ೧೪೦. ರಸದಳನೀರಾರಿ ಹೋಗೆ | ೧೪ |
| ೧೪೧. ರೂಪಾತರ ಕೃಪೆ ನೆಲಕಿಳಿಯೆ | ೪೫ |
| ೧೪೨. ವಿಭಾಗಿಪುದೊ ಅಹಂಕಾರ; | ೪೧ |
| ೧೪೩. ವಿರಹಕಿಂತ ನರಕವಿಲ್ಲ | ೩೨ |
| ೧೪೪. ವಿರಹಕಿಂತ ಹಿರಿಯದಿಲ್ಲ | ೬೧ |
| ೧೪೫. ವೀಣಾರೂಪಿ ದೇವರ ದನಿಯಿದು | ೨೩ |
| ೧೪೬. ಸರಸ್ವತಿಯ ಸಹಸ್ರ ಬಾಹು; | ೫೭ |
| ೧೪೭. ಸಾಕು, ತಾಯಿ, ಸಾಕು, ಈ ಸಾವು, ಈ ಸಾವು: | ೫೨ |

| | |
|---|---|
| ೧೪೮. ಸಾಗರ ಸಾಗರ ರಸದ ನಯಾಗರ | ೬೦ |
| ೧೪೯. ಸಿದ್ಧಗುರು ವಾಕ್ಯಕಿಂ ಮಿಗಿಲಿಹುದೆ ಬುದ್ಧಿ? | ೨೮ |
| ೧೫೦. ಸುತ್ತಮುತ್ತ ಸುಖದ ಹುತ್ತ, | ೨೮ |
| ೧೫೧. ಸುತ್ತಲೂ ಮರಿಕಾಡು; | ೨೭ |
| ೧೫೨. ಸುಳ್ಳಿನ ಮಾಲೆಯ ಕೊರಳಿಗೆ ಸೂಡಿ | ೭ |
| ೧೫೩. ಶಿವನೆಂದಾ ಶೈವರಾರನ್ ಸಮುಪಾಸಿಪರ್, ಬ್ರಹ್ಮವೆಂದಾ ವೇದಾಂತಿಗಳ್, | ೬೩ |
| ೧೫೪. ಹಕ್ಕಿ, ಹೂವು, ಮಕ್ಕಳು | ೬೪ |
| ೧೫೫. “ಹತ್ತು ಸಾವಿರ ಜನರು ಅಮರನಾಥ ಗುಹೆಗೆ | ೬೩ |
| ೧೫೬. ಹತ್ತಿಯಾಯ್ತು ಹುಲಿಯ ಬೆನ್ನು: | ೬೭ |
| ೧೫೭. “ಹದ್ದೂ ದ್ವಿಜ; ಹಾವೂ ದ್ವಿಜ; | ೪೪ |
| ೧೫೮. ಹರಿಯುತಿದೆ ತೆರಪಿಲ್ಲದೆಯೆ, ಕಂಬಿಯಂದದಲಿ | ೨೧ |
| ೧೫೯. ಹಸರು, ಬಿಸಿಲು, ಇಬ್ಬನಿ; | ೪೭ |
| ೧೬೦. ಹಸುರು ಹಾಸಿದ ನೆಲದ ೬೨ | |
| ೧೬೧. ಹೂದೋಂಟದಿ ಬೇಂಟೆಯಾಡಿ | ೫೯ |
| ೧೬೨. ಹೂವನೀಂಟುವ ಬಣ್ಣಬಣ್ಣದ ಚಿಟ್ಟೆಹಕ್ಕಿ, | ೨೬ |
| ೧೬೩. ಹೇ ಅತಿಮಾನಸ ಮಸ್ತಕೇ, | ೩೩ |
| ೧೬೪. ಹೊಟ್ಟೆಗಿಷ್ಟು ಹಿಟ್ಟು ಕೊಡಿ; | ೧೨ |
| ೧೬೫. ಹೊನ್ನೆಂದಿತು ತಳತಳ ಮಿಂಚಿ: | ೩೬ |
| ೧೬೬. ಹೊಲದಂದದಿ ಹಬ್ಬಿದೆ ದೇವರ ಮೆಯ್ | ೩೦ |
| ೧೬೭. ಹೊಜೀವನ ಹೊನ್ನಾಗಲಿ: | ೪೯ |
| ೧೬೮. ಹೊಳೆಯ ನಡುಗಡ್ಡೆ ಹಸುರಲಿ ಬಿಳಿಯ ಡಂದು: | ೪೭ |
| ೧೬೯. ಹೋದ ನಾಕ ಮರಳಿತು; | ೩೫ |